ವಿಜಯಪುರ । ಸಂಪುಟ 04 । ಸಂಚಿಕೆ 241 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಗುರುವಾರ, ನವೆಂಬರ್ 19, 2026



"ವಿಜಯಪುರ ಜಿಲ್ಲೆಯ ಕ್ರೀಡಾಪಟುಗಳು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೌಶಲ್ಯ ಹೊಂದಲು ಎಲ್ಲ ಸಹಾಯ-ಸಹಕಾರ ನೀಡಲು ನಾನು ಸಿದ್ಧ. ಅದಕ್ಕಾಗಿ ಅವರಿಗೆ ಸೂಕ್ತ ತರಬೇತಿ ಹಾಗೂ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ನಮ್ಮ ಆಕಾಶ ಫೌಂಡೇಶನ್ ಹೊಂದಿದೆ."

■ ಕೆ.ಎಸ್.ಬಿರಾದಾರ
ಎನ್‌ಐಎಸ್ ಕೋಚ್, ಊಟಿ
ನಿರ್ದೇಶಕರು, ಶ್ರೀಸಾಯಿ ವಿಮಾನ ನಿಲ್ದಾಣ,
ಪುಟ್ಟಪರ್ತಿ (ಆಂಧ್ರಪ್ರದೇಶ)

ಇಂದು ಸೋಮಜಾಳದಲ್ಲಿ ಮ್ಯಾರಥಾನ್ ಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ಸಿಂದಗಿ ತಾಲ್ಲೂಕಿನ ಸೋಮಜಾಳ ಗ್ರಾಮದಲ್ಲಿ ನ.19 ರಂದು ಆಕಾಶ ಬಿರಾದಾರ ಫೌಂಡೇಶನ್ ತನ್ನ ಎರಡನೆಯ ಮ್ಯಾರಥಾನ್ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಗುರುವಾರ ಸೋಮಜಾಳ ಗ್ರಾಮದಲ್ಲಿ ಬೆಳಗ್ಗೆ 7 ಗಂಟೆಗೆ ಆರಂಭವಾಗುವ ಈ ಮ್ಯಾರಥಾನ್ ಸ್ಪರ್ಧೆಯಲ್ಲಿ 5 ಕಿ.ಮೀ ಮತ್ತು 10 ಕಿ.ಮೀ ದೂರದ ಎರಡು ವಿಭಾಗಗಳನ್ನು ಮಾಡಲಾಗಿದೆ. 5 ಕಿ.ಮೀ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಗರಿಷ್ಠ ವಯೋಮಿತಿ 17 ವರ್ಷ ಮತ್ತು 10 ಕಿ.ಮೀ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಗರಿಷ್ಠ ವಯೋಮಿತಿ 20 ವರ್ಷ ಎಂದು ನಿಗದಿಪಡಿಸಲಾಗಿದೆ.

ಎರಡೂ ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳ ವಿಜೇತರಿಗೆ ಕ್ರಮವಾಗಿ ರೂ.5000/-, ರೂ.3000/-, ಹಾಗೂ ರೂ.2000/- ಬಹುಮಾನದ ಮೊತ್ತವನ್ನು ನೀಡಲಾಗುತ್ತದೆ.

ಮ್ಯಾರಥಾನ್ ಸ್ಪರ್ಧೆಯನ್ನು ಪಂಜಾಬ್ ರಾಜ್ಯದ ರಾಷ್ಟ್ರೀಯ ಕ್ರೀಡಾ ತರಬೇತುದಾರ ಅಮರಜೀತ್ ಹಾಗೂ ಕಲಕತ್ತಾದ ಪ್ರತಿಷ್ಠಿತ ಶೂ ಕಂಪನಿ ಮಾಲಿಕ ಸಾದನೀಕ್ ಅವರು ಆಗಮಿಸಲಿದ್ದು, ಅನೇಕ ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾರಣ ಜಿಲ್ಲೆಯ ಕ್ರೀಡಾಪಟುಗಳು ಮತ್ತು ಕ್ರೀಡಾಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ಬಾಗವಹಿಸಿ ಪ್ರೋತ್ಸಾಹಿಸಬೇಕೆಂದು ಎ.ಬಿ ಫೌಂಡೇಶನ್ ಸಂಸ್ಥಾಪಕರು ಮತ್ತು ಆಯೋಜಕರಾದ ಕೆ.ಎಸ್.ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಕಲಚೇತನರ ಹಕ್ಕುಗಳ ಕಾಯ್ದೆ ಅನುಷ್ಠಾನಕ್ಕೆ ಕಟ್ಟುನಿಟ್ಟಿನ ಕ್ರಮ



ಬೆಂಗಳೂರು: ವಿಕಲಚೇತನರ ಹಕ್ಕುಗಳ ಕಾಯ್ದೆ 2016 ಹಾಗೂ ಅದರ ನಿಯಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಸೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು (ಘ್.ಕ. ಓಐ. 11351/2020) ದಿನಾಂಕ 01.06.2026 ರಂದು ನೀಡಿರುವ ಪ್ರವೇಶಯೋಗ್ಯತೆ ಕುರಿತ ಕಾಲಮಿತಿಯ ನಿರ್ದೇಶನಗಳನ್ನು ಪಾಲಿಸುವ ಸಂಬಂಧ ರಾಜ್ಯ ಸರ್ಕಾರವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದ್ದಾರೆ.

ಈ ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಮುಂದುವರಿದ ಭಾಗವಾಗಿ ಬುಧವಾರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ, ವಿವಿಧ ಇಲಾಖೆಗಳು ತುರ್ತಾಗಿ ಕೈಗೊಳ್ಳಬೇಕಾದ ಪ್ರಮುಖ ನಿರ್ಧಾರಗಳನ್ನು ಪ್ರಕಟಿಸಲಾಯಿತು.

ನೇಮಕಾತಿಯಲ್ಲಿ ಶೇ.5 ಮೀಸಲಾತಿ: ಎಲ್ಲಾ ಸರ್ಕಾರಿ ಇಲಾಖೆಗಳು ನೇಮಕಾತಿ ಅಧಿಸೂಚನೆ ಹೊರಡಿಸುವ ಮುನ್ನ ವಿಕಲಚೇತನ ಅಭ್ಯರ್ಥಿಗಳಿಗೆ ಶೇ.5 ರಷ್ಟು ಹುದ್ದೆಗಳನ್ನು ಮೀಸಲಿಟ್ಟಿರುವ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ದೃಢೀಕರಿಸಿದ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಸಾರ್ವಜನಿಕ ಮೂಲಸೌಕರ್ಯ ಹಾಗೂ ಉಳಿಕೆ ದಾಖಲೀಕರಣ: ನಗರ ಸ್ಥಳೀಯ ಸಂಸ್ಥೆಗಳ ರಸ್ತೆಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಮಾರುಕಟ್ಟೆಗಳು ಮತ್ತು ಸಾರ್ವಜನಿಕ ಶೌಚಾಲಯಗಳನ್ನು ವಿಕಲಚೇತನ ಸ್ನೇಹಿಯಾಗಿ ವಿನ್ಯಾಸಗೊಳಿಸಿರುವ ಬಗ್ಗೆ ಸಂಬಂಧಿತ ಇಂಜಿನಿಯರಿಂಗ್ ವಿಭಾಗಗಳು ದೃಢೀಕರಣ ನೀಡಬೇಕು. ಅಲ್ಲದೆ, ರಾಜ್ಯಾದ್ಯಂತ ಲಭ್ಯವಿರುವ ಕಟ್ಟಡಗಳ ಏಕೀಕೃತ ದಾಖಲೆಗಾಗಿ ಈ ಮಾಹಿತಿಯನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ ನಿರ್ವಹಿಸುತ್ತಿರುವ ಉಳಿಕೆ ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಬೇಕುಎಂದುಸೂಚಿಸಿದರು.

ವಾರದೊಳಗೆ ಅನುಪಾಲನಾ ವರದಿಗೆ ಸೂಚನೆ: ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನುಪಾಲನೆ ಕುರಿತು ಪ್ರತಿ ಕೆಡಿಪಿ (ಏಆಕ) ಸಭೆಗಳಲ್ಲಿ ವಿಷಯಸೂಚಿಯನ್ನು ಕಡ್ಡಾಯವಾಗಿ ಸೇರಿಸಬೇಕು. ಎಲ್ಲಾ ಇಲಾಖೆಗಳು ನಿಗದಿತ ಕಾಲಮಿತಿಯೊಳಗೆ ಕೈಗೊಂಡ ಕ್ರಮಗಳ ಕುರಿತು 'ಅನುಪಾಲನಾ ವರದಿ'ಯನ್ನು ಒಂದು ವಾರದೊಳಗಾಗಿ ಸಲ್ಲಿಸುವಂತೆ ಸಭೆಯಲ್ಲಿ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು.

ಸಾರಿಗೆ ಮತ್ತು ಸಂಚಾರ ವ್ಯವಸ್ಥೆ



ಸಾರ್ವಜನಿಕ ಸಾರಿಗೆ ಬಸ್ಸುಗಳು ಮತ್ತು ನಿಲ್ದಾಣಗಳಲ್ಲಿ ವಿಕಲಚೇತನರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ಸಿಬ್ಬಂದಿಗೆ ಸಂವೇದನಾಶೀಲತಾ ಶಿಬಿರಗಳನ್ನು ಆಯೋಜಿಸಬೇಕು. ಅಲ್ಲದೆ, ವಿಕಲಚೇತನರು ಸುಲಭವಾಗಿ ರಸ್ತೆ ದಾಟಲು ಅನುಕೂಲವಾಗುವಂತೆ ಟ್ರಾಫಿಕ್ ಸಿಗ್ನಲ್‌ಗಳ ಸಾಫ್ಟ್‌ವೇರ್‌ನಲ್ಲಿ ಅಗತ್ಯ ಬದಲಾವಣೆ ಮಾಡಲು ಪೊಲೀಸ್ ಇಲಾಖೆಗೆ ಸೂಚಿಸಲಾಯಿತು.

■ ಉಚ್ಚ ನ್ಯಾಯಾಲಯದ ಆದೇಶ ಪಾಲನೆಗೆ ಇಲಾಖೆಗಳಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸೂಚನೆ । ವಿಕಲಚೇತನ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಶೇ.5 ಮೀಸಲಾತಿಗೆ ಸೂಕ್ತ ಕ್ರಮ ವಹಿಸಲು ಸೂಚನೆ

ಕಾರ್ಮಿಕ ಇಲಾಖೆ ಆದೇಶದಂತೆ ನೌಕರರ ವೇತನ ಪಾವತಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚ ನೌಕರರಿಗೆ ಕಾರ್ಮಿಕ ಇಲಾಖೆಯ ಆದೇಶದಂತೆ ವೇತನ ಪಾವತಿಸುವಂತೆ ಆಗ್ರಹಿಸಿ ಪಂಚ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮಂಗಳವಾರ ತಾಲ್ಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಆನಂದಕುಮಾರ ಮ್ಯಾಗೇರಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಶಂಕರ ಭೂವಿನ ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಕರ ವಸೂಲಿಗಾರ, ನೀರುಗಂಟಿ, ಜವಾನ ಹಾಗೂ ಸ್ವಚ್ಛತಗಾರರಾಗಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಗ್ರಾಮೀಣ ಜನರಿಗೆ ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸುವಲ್ಲಿ ಹಾಗೂ ಪಂಚಾಯಿತಿ ಆಡಳಿತದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ನೌಕರರ ಪಾತ್ರ ಮಹತ್ವದ್ದಾಗಿದೆ ಎಂದರು.

ದಿನಾಂಕ 22-05-2026ರಂದು ಕಾರ್ಮಿಕ ಇಲಾಖೆಯು ಹೊರಡಿಸಿರುವ ಅಧಿಸೂಚನೆಯಂತೆ ವೇತನ ಪಾವತಿಸಬೇಕು.

ಈ ಕುರಿತು ಹೈಕೋರ್ಟ್ ಕೂಡ ಆದೇಶ ನೀಡಿದೆ. ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆಯಾಗದಿದ್ದರೂ ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಿಂದ ನೌಕರರ ವೇತನ ಪಾವತಿಸಲು ಸೂಚಿಸಲಾಗಿದೆ. ಆದ್ದರಿಂದ ಕಾರ್ಮಿಕ ಇಲಾಖೆಯ ಆದೇಶದಂತೆ ವೇತನ ಪಾವತಿಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಚನ್ನಬಸವ ಪೂಜೇರಿ, ಶರಣು ಜಿಡ್ಡಿ, ಶಿವಾನಂದ ಪತ್ತಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇಂಡಿ ಬಸ್ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ ಹೆಸರು ನಾಮಕರಣ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ನಗರದ ಬಸ್ ನಿಲ್ದಾಣಕ್ಕೆ ಸ್ವಾತಂತ್ರ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಹೆಸರನ್ನು ನಾಮಕರಣ ಮಾಡಲಾಗಿದ್ದು, ಶೀಘ್ರದಲ್ಲೇ ಬಸ್ ನಿಲ್ದಾಣದ ನಾಮಫಲಕ ಬದಲಾಯಿಸಿ 'ಸಂಗೊಳ್ಳಿ ರಾಯಣ್ಣ ಬಸ್ ನಿಲ್ದಾಣ' ಎಂದು ಅಧಿಕೃತವಾಗಿ ಅಳವಡಿಸಲಾಗುವುದು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ನಗರದ ಬಸ್ ನಿಲ್ದಾಣದ ಎದುರುಗಡೆಸ್ಥಾಪಿಸಲಾಗಿರುವಕ್ರಾಂತಿವೀರಸಂಗೊಳ್ಳಿ ರಾಯಣ್ಣ ಅವರ ಪುತ್ಥಳಿಯನ್ನು ಕೂಡ ಶೀಘ್ರದಲ್ಲೇ ಅದ್ಧೂರಿ ಕಾರ್ಯಕ್ರಮ ಆಯೋಜಿಸುವ ಮೂಲಕ ಲೋಕಾರ್ಪಣೆಗೊಳಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಸಂಗೊಳ್ಳಿ ರಾಯಣ್ಣ ಅವರು ದೇಶದ ಸ್ವಾತಂತ್ರ ಹೋರಾಟದಲ್ಲಿ ಅಪ್ರತಿಮ ಧೈರ್ಯ, ಸಾಹಸ ಮತ್ತು ದೇಶಪ್ರೇಮ ಮೆರೆದ ಮಹಾನ್ ಹೋರಾಟಗಾರರಾಗಿದ್ದಾರೆ. ಅವರ ಹೆಸರನ್ನು ಬಸ್ ನಿಲ್ದಾಣಕ್ಕೆ ನಾಮಕರಣ ಮಾಡಿರುವುದು ಅವರ ತ್ಯಾಗ, ಹೋರಾಟ ಮತ್ತು ದೇಶಭಕ್ತಿಗೆ ಸಲ್ಲಿಸುವ ಗೌರವವಾಗಿದೆ.

ಬಸ್ ನಿಲ್ದಾಣದ ನಾಮಫಲಕ ಬದಲಾವಣೆ ಹಾಗೂ ಪುತ್ಥಳಿಯ ಅದ್ಧೂರಿ ಲೋಕಾರ್ಪಣೆಯಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಇತಿಹಾಸ ಮತ್ತು ಆದರ್ಶಗಳು ಮುಂದಿನ ಪೀಳಿಗೆಗೆ ಪರಿಚಯವಾಗಲಿವೆ ಎಂದು ಶಾಸಕರು ತಿಳಿಸಿದ್ದಾರೆ.



ಕಾರ್ಮಿಕ ಇಲಾಖೆ ಆದೇಶದಂತೆ ನೌಕರರ ವೇತನ ಪಾವತಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚ ನೌಕರರಿಗೆ ಕಾರ್ಮಿಕ ಇಲಾಖೆಯ ಆದೇಶದಂತೆ ವೇತನ ಪಾವತಿಸುವಂತೆ ಆಗ್ರಹಿಸಿ ಪಂಚ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮಂಗಳವಾರ ತಾಲ್ಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಆನಂದಕುಮಾರ ಮ್ಯಾಗೇರಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಶಂಕರ ಭೂವಿನ ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಕರ ವಸೂಲಿಗಾರ, ನೀರುಗಂಟಿ, ಜವಾನ ಹಾಗೂ ಸ್ವಚ್ಛತಗಾರರಾಗಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಗ್ರಾಮೀಣ ಜನರಿಗೆ ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸುವಲ್ಲಿ ಹಾಗೂ ಪಂಚಾಯಿತಿ ಆಡಳಿತದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ನೌಕರರ ಪಾತ್ರ ಮಹತ್ವದ್ದಾಗಿದೆ ಎಂದರು.

ದಿನಾಂಕ 22-05-2026ರಂದು ಕಾರ್ಮಿಕ ಇಲಾಖೆಯು ಹೊರಡಿಸಿರುವ ಅಧಿಸೂಚನೆಯಂತೆ ವೇತನ ಪಾವತಿಸಬೇಕು.

ಈ ಕುರಿತು ಹೈಕೋರ್ಟ್ ಕೂಡ ಆದೇಶ ನೀಡಿದೆ. ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆಯಾಗದಿದ್ದರೂ ಗ್ರಾಮ ಪಂಚಾಯಿತಿಗಳ ಸ್ವಂತ ಸಂಪನ್ಮೂಲದಿಂದ ನೌಕರರ ವೇತನ ಪಾವತಿಸಲು ಸೂಚಿಸಲಾಗಿದೆ. ಆದ್ದರಿಂದ ಕಾರ್ಮಿಕ ಇಲಾಖೆಯ ಆದೇಶದಂತೆ ವೇತನ ಪಾವತಿಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಚನ್ನಬಸವ ಪೂಜೇರಿ, ಶರಣು ಜಿಡ್ಡಿ, ಶಿವಾನಂದ ಪತ್ತಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.





371(ಜೆ) ಹೋರಾಟ ಬೆಂಬಲಿಸಿ ಮಾನವ ಸರಪಳಿ ನಿರ್ಮಿಸಿ ರಸ್ತೆತಡೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಬಸವೇಶ್ವರ ಸರ್ಕಲ್ ಹತ್ತಿರ ಗೋಕಾಕ ಚಳವಳಿಯ ರೂವಾರಿ ಶ್ರೀ ರೇ.ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ 48 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಬಳಿಯ ರಸ್ತೆಯಲ್ಲಿ ಬುಧವಾರ ಸಾವಿರಾರು ವಿದ್ಯಾರ್ಥಿಗಳು ಮಾನವ ಸರಪಳಿ ನಿರ್ಮಿಸಿ ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ದಲಿತ ವಿದ್ಯಾರ್ಥಿ ಪರಿಷತ್ತು ಜಿಲ್ಲಾ ಸಂಚಾಲಕ ಹುಚ್ಚಪ್ಪ ಬಾವಿಮನಿ ಮಾತನಾಡಿ, ಡಾ.ಅಂಬೇಡ್ಕರ ಅವರ ಸಂವಿಧಾನದ 98ರ ಅನುಛೇದ ತಿದ್ದಪಡಿಯಲ್ಲಿ 2013ರಲ್ಲಿ ಹೈದ್ರಾಬಾದ ಕರ್ನಾಟಕದ 6 ಜಿಲ್ಲೆಗಳಿಗೆ ಜಾರಿ ಮಾಡುವ ಸಂದರ್ಭದಲ್ಲಿ ಡಾ. ಡಿ.ಎಂ.ನಂಜುಂಡಪ್ಪ ವರದಿಯಲ್ಲಿರುವ ಸಿಂದಗಿ, ಇಂಡಿ, ಬಾಗೇವಾಡಿ, ಮುದ್ದೇಬಿಹಾಳ ತಾಲೂಕುಗಳು ದಾಖಲಿವೆ. ಆದರೆ ಇವುಗಳನ್ನು ಹೀಂದುಳಿಸಿ ಕೇಂದ್ರಕ್ಕೆ ಶಿಪ್ಪಾರಸ್ಸು ಮಾಡಲಾಗಿದೆ. ಅದರ ಮರುಪಶೀಲನೆ ಮಾಡಬೇಕು, ಇಲ್ಲದಿದ್ದರೆ ಜಿಲ್ಲೆಯಾದ್ಯಂತ ಉಗ್ರ ಸ್ವರೂಪದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಎಚ್.ಜಿ.ಕಾಲೇಜಿನ ಪ್ರಾಚಾರ್ಯ ಎ.ಆರ್.ಹೆಗ್ಗನದೊಡ್ಡಿ ಮಾತನಾಡಿ, ನಗರದ ಪ್ರದೇಶದ ಗೋಲಿಬಾರ ಮಡ್ಡಿ, ಕಕ್ಕಳಮೇಲಿ, ಮಾಡಬಾಳ, ಚಟ್ಟರಕಿ, ಸೇರಿದಂತೆ ತಾಲೂಕಿನ ಕೆಲವು ಕಡೆಗಳಲ್ಲಿ ರಜಾರಕರ ಧಂಗೆಯಲ್ಲಿ ಹಾಳಾದ ಬಗ್ಗೆ ದಾಖಲೆಗಳಿವೆ. ಆದಾಗ್ಯೂ ಜಿಲ್ಲಾ ರಾಜಕಾರಣಿಗಳ ನಿರ್ಲಕ್ಷ್ಯ ದೋರಣೆಯಿಂದ ಈ ಜಿಲ್ಲೆ ಕೈಬಿಟ್ಟು ಹೋಗಿದೆ. ಅದರ ಮರುಪರಿಶೀಲನೆ ನಡೆಸುವುದು ನಮ್ಮೆಲ್ಲರ ಹಕ್ಕೋತ್ತಾಯವಾಗಿದೆ. ಕಾರಣ ಪ್ರತಿ ಮನೆಯಿಂದ ವಿದ್ಯಾರ್ಥಿಗಳ ಪಡೆ ಹೊರಬಂದು ಜನಾಂದೋಲ ನಡೆಸಬೇಕು ಅಂದಾಗ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಚ್ಚೆತ್ತುಕೊಂಡು ಇತ್ತ ನೋಡಿ ವಿಜಯಪುರ ಜಿಲ್ಲೆಯನ್ನು ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಮಾದರಿಯಲ್ಲಿ ವಿಜಯಪುರ ಜಿಲ್ಲೆಯನ್ನು ಸಹ ಸಂವಿಧಾನದ 371(ಜೆ) ವಿಶೇಷ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರು.

ಬಮ್ಮನಜೋಗಿ ಗ್ರಾಮದ ಜಗದೀಶ ನಾಯ್ಕೋಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಖಿಂಡ ರೈತಸಂಘದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ರಂಜುಣಗಿ, ಉಪಾಧ್ಯಕ್ಷ ಶಿವಶರಣಪ್ಪ ಬಿರಾದಾರ, ಜಗದೇವಿ ಬಿರಾದಾರ, ಅಶೋಕ ಅಲ್ಲಾಪುರ, ದಲಿತ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷ ಹರ್ಷವರ್ಧನ ಪೂಜಾರಿ, ಸಮಿತಿಯ ರಂಗನಾಥ ತೊರ್ಪೆ, ಎಂ.ಎಂ.ಹಂಗರಗಿ, ಅಶೋಕ ಅಲ್ಲಾಪುರ, ಗುರುರಾಜ ಪಡಶೆಟ್ಟಿ, ಶಂಕರ ಮಲ್ಲೇದ, ಪಂಡಿತ ಯಂಪೂರೆ, ಸಂಗಪ್ಪ ಬ್ಯಾಕೋಡ, ಪ್ರಶಾಂತ ಕುಲಕರ್ಣಿ, ದಾನಪ್ಪಗೌಡ ಚನಗೊಂಡ ವಕೀಲರು, ಸಿದ್ದು ಕಡಗಂಚಿ, ಪರಮೇಶ ಬಗಲಿ, ಅಂಬರೀಶ ಸುಣಗಾರ, ಎಸ್.ಆರ್.ಪಾಟೀಲ, ಬಾಬು ವಾಲೀಕಾರ ಸೇರಿದಂತೆ ಎಚ್.ಜಿ.ಪಪೂ ಕಾಲೇಜಿನ, ಸರಕಾರಿ ಪಪೂ ಕಾಲೇಜಿನ, ಆರ್.ಡಿ.ಪಾಟೀಲ ಕಾಲೇಜಿನ, ಸರಕಾರಿ ವಸತಿ ನಿಲಯದ, ಓಂಕಾರ ಕೆರಿಯರ ಅಕೆಡೆಮಿ ಗ್ರಂಥಾಲಯದ, ಕುವೆಂಪು ಗ್ರಂಥಾಲಯದ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

■ ಎಚ್.ಜಿ.ಪಪೂ ಕಾಲೇಜ, ಸರಕಾರಿ ಪಪೂ ಕಾಲೇಜ, ಆರ್.ಡಿ.ಪಾಟೀಲ ಕಾಲೇಜ, ಸರಕಾರಿ ವಸತಿ ನಿಲಯ, ಓಂಕಾರ ಕೆರಿಯರ ಅಕೆಡೆಮಿ ಗ್

ಬದುಕಿನ ದಿಕ್ಕು ಬದಲಿಸುವುದು ಹೇಗೆ?

ಜೀವನದಲ್ಲಿ ನಾವು ಎಲ್ಲಿಂದ ಬಂದಿದ್ದೇವೆ ಎಂಬುದಕ್ಕಿಂತ, ನಾವು ಎಲ್ಲಿಗೆ ತಲುಪಲು ಬಯಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಪ್ರತಿಯೊಂದು ಹೊಸ ದಿನವೂ ನಮಗೆ ನಮ್ಮನ್ನು ನಾವು ತಿದ್ದಿಕೊಳ್ಳಲು ಸಿಗುವ ಒಂದು ಹೊಸ ಅವಕಾಶ. ನಿನ್ನೆಯ ತಪ್ಪುಗಳ ಬಗ್ಗೆ ಚಿಂತಿಸುತ್ತಾ ಕೂರುವ ಬದಲು, ಇಂದಿನ ಅರಿವಿನೊಂದಿಗೆ ನಾಳೆಯ ಭವಿಷ್ಯವನ್ನು ಸುಂದರವಾಗಿ ನಿರ್ಮಿಸೋಣ. ನಮ್ಮೊಳಗಿನ ಶಕ್ತಿಯನ್ನು ನಂಬಿ ಮುನ್ನಡೆದರೆ ಯಾವುದೇ ಗುರಿ ಅಸಾಧ್ಯವಲ್ಲ.




ಜಯಶ್ರೀ ಜೆ ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ – ಮೊ:9449234142

■ ಉದಯರಶ್ಮಿ ದಿನಪತ್ರಿಕೆ

"ನಿಮಗೆ ಉತ್ತಮವಾದುದು ತಿಳಿಯುವವರೆಗೂ ನಿಮ್ಮಿಂದ ಸಾಧ್ಯವಾದಷ್ಟು ಉತ್ತಮವಾದುದನ್ನು ಮಾಡಿ. ನಂತರ ಉತ್ತಮವಾದುದು ತಿಳಿದಾಗ, ಇನ್ನೂ ಉತ್ತಮವಾಗಿ ಮಾಡಿ." ಡಾ. ಮಾಯಾ ಂಜೆಲೋ.

ನಮ್ಮ ಜೀವನವು ನಿರಂತರ ಕಲಿಕೆಯ ಒಂದು ಸುಂದರ ಪಯಣ. ಮನುಷ್ಯನಾಗಿ ಹುಟ್ಟಿದ ಪ್ರತಿಯೊಬ್ಬರೂ ತಪ್ಪುಗಳನ್ನು ಮಾಡುವುದು ಸಹಜ. ಆದರೆ ಆ ತಪ್ಪುಗಳಿಂದ ಕಲಿತು, ನಮ್ಮನ್ನು ನಾವು ತಿದ್ದಿಕೊಳ್ಳುವುದೇ ನಿಜವಾದ ವ್ಯಕ್ತಿತ್ವ ವಿಕಸನ. ನಮಗೆ ಇಂದು ತಿಳಿದಿರುವ ಜ್ಞಾನದ ಮಿತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನಾಳೆ ಹೊಸ ಅರಿವು ಮೂಡಿದಾಗ ನಮ್ಮ ಕಾರ್ಯದ ಗುಣಮಟ್ಟವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು.



ಈ ಮಾತಿಗೆ ಪೂರಕವಾಗಿ ಪ್ರಾಚೀನ ತಮಿಳು ಸಾಹಿತ್ಯದ 'ತಿರುಕ್ಕುರಳ್' ಮತ್ತು ಜಾನಪದದಲ್ಲಿ ಬರುವ ಯುವ ಶಿಲ್ಪಿಯೊಬ್ಬನ ಪ್ರಸಂಗವು ನಮಗೆ ಉತ್ತಮ ಪಾಠವನ್ನು ಕಲಿಸುತ್ತದೆ. ಕಲ್ಲೊಂದನ್ನು ಕೆತ್ತಲು ಪ್ರಾರಂಭಿಸಿದ ಆ ಯುವಕ ತನಗೆ ತಿಳಿದಿದ್ದ ಹಳೆಯ ವಿಧಾನವನ್ನೇ ಬಳಸಿ ಹಗಲಿರುಳು ಶ್ರಮಿಸಿದರೂ ವಿಗ್ರಹಕ್ಕೆ ಜೀವಕಳೆ ಬರಲಿಲ್ಲ. ಆದರೆ ಒಬ್ಬ ಹಿರಿಯ ಗುರುಗಳು ಬಂದು ಕಲ್ಲಿನ ನರಗಳನ್ನು ಗಮನಿಸಿ ಉಳಿ ಹಿಡಿಯುವ ಕೋನವನ್ನು ಬದಲಿಸಲು ತಿಳಿಸಿದಾಗ, ಯುವಕ ತನ್ನ ಹಳೆಯ ಹಠವನ್ನು ಬಿಟ್ಟು ಹೊಸ ರೀತಿಯಲ್ಲಿ ಕೆತ್ತಲು ಶುರುಮಾಡಿದ. ಕೆಲವೇ ದಿನಗಳಲ್ಲಿ ಅದ್ಭುತವಾದ ಶಿಲ್ಪವೊಂದು ಅರಳಿ ನಿಂತಿತು. ಹಳೆಯ ಅರಿವಿನಲ್ಲಿ ಅವನು ತನ್ನ ಶ್ರಮವನ್ನು ಹಾಕಿದ್ದ, ಆದರೆ ಹೊಸ ಜ್ಞಾನ ಸಿಕ್ಕಾಗ ಅದನ್ನು ಅಳವಡಿಸಿಕೊಂಡು ಶ್ರೇಷ್ಠತೆಯನ್ನು ಸಾಧಿಸಿದ.

ಅರಿವಿನಿಂದ ಆಚರಣೆಯತ್ತ: ಉತ್ತಮರಾಗುವ ಸೂತ್ರಗಳು

ನಿರಂತರ ಆತ್ಮಾವಲೋಕನ (Continuous Self-Reflection)

ನಮ್ಮ ದೈನಂದಿನ ನಡವಳಿಕೆ ಮತ್ತು ನಿರ್ಧಾರಗಳನ್ನು ನಾವೇ ಪ್ರಾಮಾಣಿಕವಾಗಿ ವಿಮರ್ಶೆಮಾಡಿಕೊಳ್ಳುವುದುಬಹಳಮುಖ್ಯ. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದಂತೆ, "ನನ್ನನ್ನು ನಾನು ಅರಿತುಕೊಳ್ಳುವುದೇ ಎಲ್ಲಾ ಜ್ಞಾನದ ಆರಂಭ." ಪ್ರತಿದಿನ ರಾತ್ರಿ ಮಲಗುವ ಮುನ್ನ ಇಂದು ನಾನು ಮಾಡಿದ ಕಾರ್ಯಗಳಲ್ಲಿ ಯಾವುದು ಸರಿ ಮತ್ತು ಯಾವುದನ್ನು ಇನ್ನಷ್ಟು ಉತ್ತಮವಾಗಿ ಮಾಡಬಹುದಿತ್ತು ಎಂದು ಯೋಚಿಸಬೇಕು. ಈ ಆತ್ಮಾವಲೋಕನವು ನಮ್ಮಲ್ಲಿರುವ ಸಣ್ಣಪುಟ್ಟ ದೋಷಗಳನ್ನು ತಿದ್ದಿಕೊಳ್ಳಲು ಸಹಾಯ ಮಾಡುತ್ತದೆ. ಬೇರೆಯವರು ನಮ್ಮನ್ನು ಟೀಕಿಸುವ ಮೊದಲೇ ನಾವೇ ನಮ್ಮನ್ನು ತಿದ್ದಿಕೊಂಡರೆ ವ್ಯಕ್ತಿತ್ವವು ಹೊಳಪು ಪಡೆಯುತ್ತದೆ.

ರಚನಾತ್ಮಕ ಟೀಕೆಗಳ ಸ್ವೀಕಾರ (Embracing Constructive Criticism)


ಇತರರು ನೀಡುವ ರಚನಾತ್ಮಕ ಟೀಕೆಗಳನ್ನು ನಾವು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಸಾಕ್ರೆಟಿಸ್ ಹೇಳಿದಂತೆ, "ನನಗೆ ಏನೂ ತಿಳಿದಿಲ್ಲ ಎಂಬುದು ನನಗೆ ತಿಳಿದಿರುವ ಏಕೈಕ ಸತ್ಯ." ಯಾರಾದರೂ ನಮ್ಮ ಕಾರ್ಯದಲ್ಲಿ ತಪ್ಪುಗಳನ್ನು ತೋರಿಸಿದಾಗ ಕೋಪಗೊಳ್ಳುವ ಬದಲು, ಅದನ್ನು ಕಲಿಕೆಯ ಒಂದು ಅವಕಾಶವೆಂದು ಭಾವಿಸಬೇಕು. "Do not be afraid of your shadow, it simply means there is a light nearby" ಎಂಬ ಆಂಗ್ಲ ನಾಣ್ಣುಡಿಯಂತೆ, ಟೀಕೆಗಳನ್ನು ಸಕಾರಾತ್ಮಕವಾಗಿ ತೆಗೆದುಕೊಂಡಾಗ ನಮ್ಮಲ್ಲಿರುವ ಅಹಂಕಾರ ಕರಗಿ ನಿಜವಾದ ಜ್ಞಾನವು ಒಳಗೆ ಬರಲು ಸಾಧ್ಯವಾಗುತ್ತದೆ.

ಕುತೂಹಲ ಮತ್ತು ಓದುವ ಹವ್ಯಾಸ (Cultivating Curiosity and Reading) ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲವನ್ನು ನಾವು ಎಂದಿಗೂ ಕಳೆದುಕೊಳ್ಳಬಾರದು. ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸವು ನಮ್ಮ ಆಲೋಚನಾ ಲಹರಿಯನ್ನು ವಿಸ್ತರಿಸುತ್ತದೆ. ಸಾಕ್ರೆಟಿಸ್ ಅವರ ಮತ್ತೊಂದು ನುಡಿಯಂತೆ, "ಬದಲಾವಣೆಯ ರಹಸ್ಯವೆಂದರೆ ನಿಮ್ಮ ಎಲ್ಲಾ ಶಕ್ತಿಯನ್ನು ಹಳೆಯದರ ವಿರುದ್ಧ ಹೋರಾಡಲು ಬಳಸದೆ, ಹೊಸದನ್ನು ನಿರ್ಮಿಸಲು ಬಳಸುವುದು." "The best time to plant a tree was twenty years ago, the second best time is now" ಎಂಬ ಮಾತಿನಂತೆ, ಇಂದಿನಿಂದಲೇ ಹೊಸ ವಿಚಾರಗಳ ಬಗ್ಗೆ ಓದುವ ಮತ್ತು ಕೇಳುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು.



ಸುರಕ್ಷಿತ ವಲಯದಿಂದ ಹೊರಬರುವುದು (Stepping Out of Comfort Zones)

ನಮ್ಮ ಸುರಕ್ಷಿತ ವಲಯದಿಂದ ಹೊರಬಂದು ಹೊಸ ಸವಾಲುಗಳನ್ನು ಎದುರಿಸಲು ನಾವು ಸದಾ ಸಿದ್ಧರಿರಬೇಕು. "A smooth sea never made a skilled sailor" ಎಂಬ ಪ್ರಸಿದ್ಧ ಆಂಗ್ಲ ಗಾದೆಯು ಕಷ್ಟಗಳೇ ನಮ್ಮನ್ನು ಗಟ್ಟಿಗೊಳಿಸುತ್ತವೆ ಎಂಬ ಸತ್ಯವನ್ನು ಸಾರುತ್ತದೆ. ನಮಗೆ ಈಗಾಗಲೇ ತಿಳಿದಿರುವ ಕಾರ್ಯಗಳನ್ನೇ ಮತ್ತೆ ಮತ್ತೆ ಮಾಡುವುದರಿಂದ ಯಾವುದೇ ಹೊಸ ಬೆಳವಣಿಗೆ ಸಾಧ್ಯವಿಲ್ಲ. ಹೊಸ ಕೌಶಲ್ಯಗಳನ್ನು ಕಲಿಯಲು ಅಥವಾ ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಎದುರಾಗುವ ಭಯವನ್ನು ಮೀರಿ ಮುನ್ನಡೆದಾಗ ಮಾತ್ರ ನಮ್ಮ ನಿಜವಾದ ಸಾಮರ್ಥ್ಯ ನಮಗೆ ಅರಿವಾಗುತ್ತದೆ.



ದೈನಂದಿನ ಕೃತಜ್ಞತಾ ಭಾವ (Practicing Daily Gratitude)

ನಮ್ಮ ಜೀವನದಲ್ಲಿ ಈಗಾಗಲೇ ಇರುವ ಅಮೂಲ್ಯ ಸಂಗತಿಗಳಿಗೆ ಕೃತಜ್ಞತೆ ಸಲ್ಲಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. "Little keys open big doors" ಎಂಬ ಮಾತಿನಂತೆ, ಪ್ರತಿದಿನದ ಸಣ್ಣಪುಟ್ಟ ಕೃತಜ್ಞತೆಯು ಮನಸ್ಸಿನಲ್ಲಿ ದೊಡ್ಡ ಬದಲಾವಣೆಯನ್ನು ತರುತ್ತದೆ. ನಮಗೆ ಸಿಕ್ಕಿರುವ ಅವಕಾಶಗಳು, ಸಹಾಯ ಮಾಡಿದ ಜನರು ಮತ್ತು ಕಲಿತ ಪಾಠಗಳನ್ನು ಸ್ಮರಿಸುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ. ನಾವು ಇರುವ ಸ್ಥಿತಿಯನ್ನು ಗೌರವಿಸಿದಾಗ ಮಾತ್ರ ಮುಂದಿನ ಹಂತಕ್ಕೆ ಏರಲು ಬೇಕಾದ ಉತ್ಸಾಹ ನಮಗೆ ದೊರೆಯುತ್ತದೆ ಮತ್ತು ಮನಸ್ಸು ಸದಾ ಸಕಾರಾತ್ಮಕವಾಗಿರುತ್ತದೆ.

ಪರಿಪೂರ್ಣತೆಗಿಂತ ನಿರಂತರತೆ ಮುಖ್ಯ (Consistency Over Perfection)

ಯಾವುದೇ ಕಾರ್ಯವನ್ನು ಮೊದಲ ದಿನವೇ ಪರಿಪೂರ್ಣವಾಗಿ ಮಾಡಬೇಕೆಂಬ ಒತ್ತಡಕ್ಕಿಂತ, ಪ್ರತಿದಿನ ನಿರಂತರವಾಗಿ ಪ್ರಯತ್ನಿಸುವುದು ಹೆಚ್ಚು ಮುಖ್ಯ. ಅರಿಸ್ಟಾಟಲ್ ಹೇಳಿದಂತೆ, "ನಾವು ಏನನ್ನು ಪದೇ ಪದೇ ಮಾಡುತ್ತೇವೆಯೋ ಅದೇ ನಾವಾಗುತ್ತೇವೆ. ಆದ್ದರಿಂದ ಶ್ರೇಷ್ಠತೆ ಎನ್ನುವುದು ಒಂದು ಕ್ರಿಯೆಯಲ್ಲ, ಅದೊಂದು ಅಭ್ಯಾಸ." ಹಾಗೆಯೇ "Be not afraid of growing slowly, be afraid only of standing still" ಎಂಬ ನಾಣ್ಣುಡಿಯಂತೆ, ಪರಿಪೂರ್ಣತೆಯ ಬೆನ್ನತ್ತಿ ನಿಲ್ಲುವ ಬದಲು ಪ್ರತಿದಿನ ಸಣ್ಣ ಸಣ್ಣ ಹೆಜ್ಜೆಗಳ ಮೂಲಕ ನಿರಂತರ ಸುಧಾರಣೆ ಕಂಡುಕೊಳ್ಳುವುದೇ ನಿಜವಾದ ಯಶಸ್ಸಿನ ಗುಟ್ಟು.



ಕೊನೆಯ ಮಾತು

ಜೀವನದಲ್ಲಿ ನಾವು ಎಲ್ಲಿಂದ ಬಂದಿದ್ದೇವೆ ಎಂಬುದಕ್ಕಿಂತ, ನಾವು ಎಲ್ಲಿಗೆ ತಲುಪಲು ಬಯಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಪ್ರತಿಯೊಂದು ಹೊಸ ದಿನವೂ ನಮಗೆ ನಮ್ಮನ್ನು ನಾವು ತಿದ್ದಿಕೊಳ್ಳಲು ಸಿಗುವ ಒಂದು ಹೊಸ ಅವಕಾಶ. ನಿನ್ನೆಯ ತಪ್ಪುಗಳ ಬಗ್ಗೆ ಚಿಂತಿಸುತ್ತಾ ಕೂರುವ ಬದಲು, ಇಂದಿನ ಅರಿವಿನೊಂದಿಗೆ ನಾಳೆಯ ಭವಿಷ್ಯವನ್ನು ಸುಂದರವಾಗಿ ನಿರ್ಮಿಸೋಣ. ನಮ್ಮೊಳಗಿನ ಶಕ್ತಿಯನ್ನು ನಂಬಿ ಮುನ್ನಡೆದರೆ ಯಾವುದೇ ಗುರಿ ಅಸಾಧ್ಯವಲ್ಲ. ಮಹಾನ್ ನಾಯಕ ನೆಲ್ಸನ್ ಮಂಡೇಲಾ ಅವರು ಹೇಳಿದಂತೆ, "ಯಾವುದೇ ಕೆಲಸವು ಮುಗಿಯುವವರೆಗೂ ಅದು ಅಸಾಧ್ಯವೆಂದೇ ತೋರುತ್ತದೆ." ಆದ್ದರಿಂದ, ಇಂದಿನಿಂದಲೇ ಹೊಸ ಹುಮ್ಮಸ್ಸಿನೊಂದಿಗೆ ಹೆಜ್ಜೆ ಹಾಕಿ, ನಿಮ್ಮ ಬದುಕಿನ ಅತ್ಯುತ್ತಮ ಆವೃತ್ತಿಯಾಗಿ ಹೊರಹೊಮ್ಮಿ.

ಧರ್ಮದ ಹೆಸರಿನಲ್ಲಿ ಸಂಖ್ಯಾಬಲದ ಸಂಘರ್ಷ

■ ಉದಯರಶ್ಮಿ ದಿನಪತ್ರಿಕೆ

ಧರ್ಮವನ್ನು ಉಳಿಸುವುದಕ್ಕಿಂತ ಮೊದಲು ಧರ್ಮದೊಳಗಿನ ಮಾನವೀಯತೆಯನ್ನು ಉಳಿಸಬೇಕಾಗಿದೆ. ಸಂಖ್ಯಾಬಲಕ್ಕಿಂತ ಸೌಹಾರ್ದದ ಬಲ ಮುಖ್ಯ. ಮತಾಂತರಕ್ಕಿಂತ ಮನಃಪರಿವರ್ತನೆ ಮುಖ್ಯ. ಧರ್ಮದ ವಿಜಯಕ್ಕಿಂತ ಮಾನವೀಯತೆಯ ವಿಜಯ ದೊಡ್ಡದು. ಜಗತ್ತನ್ನು ಅಳಿಸಿ ಒಂದು ಧರ್ಮವನ್ನು ಉಳಿಸುವುದರಲ್ಲಿ ಯಾವ ಪುರುಷಾರ್ಥವಿದೆ?



ಸಿದ್ಧಲಿಂಗ ಚೌಧರಿ.
ಶಿಕ್ಷಕ ಸಾಹಿತಿ
ಸಿಂದಗಿ – ವಿಜಯಪುರ ಜಿಲ್ಲೆ



ಪ್ರಶ್ನೆ ಕಾಡುತ್ತದೆ. ಹೆಚ್ಚುತ್ತಿರುವ ಅಸ್ತಿತ್ವ ಉಳಿಸಿಕೊಳ್ಳುವ ಚಿಂತನೆ

ಕೆಲವು ಧಾರ್ಮಿಕ ಸಂಘಟನೆಗಳು ಇಲ್ಲದ ಆಸೆ, ಆಮಿಷ ಮತ್ತು ಪ್ರಲೋಭನೆಗಳನ್ನು ಒಡ್ಡಿ ತಮ್ಮ ಸಂಖ್ಯಾಬಲ ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿದ್ದರೆ, ಇನ್ನೂ ಕೆಲವು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಇರುವ ಅನುಯಾಯಿಗಳನ್ನೇ ಕಾಪಾಡಿಕೊಳ್ಳುವ ಆತಂಕದಲ್ಲಿವೆ. ಹಿಂದೂ ಧರ್ಮವೂ ಸೇರಿದಂತೆ ಹಲವು ಧಾರ್ಮಿಕ ಸಮುದಾಯಗಳಲ್ಲಿ ತಮ್ಮ ಪರಂಪರೆ, ಸಂಸ್ಕೃತಿ ಮತ್ತು ಅಸ್ತಿತ್ವವನ್ನು ಉಳಿಸಿಕೊಳ್ಳುವ ಚಿಂತನೆ ಹೆಚ್ಚುತ್ತಿದೆ. ಆದರೆ ಧರ್ಮದ ಶ್ರೇಷ್ಠತೆಯನ್ನು ಅನುಯಾಯಿಗಳ ಸಂಖ್ಯೆಯಿಂದ ಅಳೆಯಬೇಕೇ ಅಥವಾ ಅದು ಸಮಾಜಕ್ಕೆ ನೀಡುವ ಮಾನವೀಯ ಮೌಲ್ಯಗಳಿಂದ ಅಳೆಯಬೇಕೇ?

ಇನ್ನೊಂದರ ವಿಪರ್ಯಾಸವೆಂದರೆ, ಒಂದೇ ಧರ್ಮದೊಳಗೆ ಹಲವಾರು ಪಂಗಡಗಳು, ಉಪಪಂಗಡಗಳು, ಜಾತಿಗಳು ಮತ್ತು ಸಂಪ್ರದಾಯಗಳಿವೆ. ಒಂದೇ ದೇವರನ್ನು ಆರಾಧಿಸುವವರು, ಒಂದೇ ಧರ್ಮಗ್ರಂಥವನ್ನು ಗೌರವಿಸುವವರು ಪರಸ್ಪರ ಭಿನ್ನಾಭಿಪ್ರಾಯಗಳಿಂದ ಸಂಘರ್ಷಕ್ಕೆ ಇಳಿಯುತ್ತಿರುವುದು ವಿಷಾದನೀಯ.



ತಮ್ಮ ಮನೆಯ ಅಣ್ಣತಮ್ಮಂದಿರನ್ನೇ ಒಗ್ಗೂಡಿಸಿ ಕೊಳ್ಳಲಾಗದವರು ಹೊರಗಿನವರನ್ನು 'ನೀವೂ ಬನ್ನಿ, ನೀವೂ ಬನ್ನಿ' ಎಂದು ಆಹ್ವಾನಿಸುವುದರಲ್ಲಿ ಯಾವ ಅರ್ಥವಿದೆ?

ಮನಸ್ಸುಗಳ ನಡುವಿನ ಗೋಡೆಗಳನ್ನು ಕೆಡವಬೇಕು

ಮೊದಲು ಮನೆಯೊಳಗಿನ ಬಿರುಕುಗಳನ್ನು ಸರಿಪಡಿಸಿಕೊಳ್ಳಬೇಕು. ಮನಸ್ಸುಗಳ ನಡುವಿನ ಗೋಡೆಗಳನ್ನು ಕೆಡವಬೇಕು. ಜಾತಿ, ಪಂಗಡ, ಮೇಲು–ಕೀಳು ಎಂಬ ಭಾವನೆಗಳನ್ನು ತೊಡೆದುಹಾಕಬೇಕು. ಇಲ್ಲದಿದ್ದರೆ ಸಂಖ್ಯಾಬಲ ಹೆಚ್ಚಿಸಿಕೊಂಡರೂ ಮಾನವೀಯತೆಯ ಬಲ ಕ್ಷೀಣಿಸುತ್ತಲೇ ಹೋಗುತ್ತದೆ. ಮರೆಯಾಗುತ್ತಿರುವ ಅವಿಭಕ್ತ ಕುಟುಂಬಗಳು ಒಂದು ಕಾಲದಲ್ಲಿ ಅವಿಭಕ್ತ ಕುಟುಂಬಗಳು ಸಹಬಾಳ್ವೆಯ ಸಂಕೇತವಾಗಿದ್ದವು. ಅಣ್ಣತಮ್ಮಂದಿರು, ಅಕ್ಕತಂಗಿಯರು, ಹಿರಿಯರು, ಕಿರಿಯರು ಒಂದೇ ಸೂರಿನಡಿ ಬದುಕುತ್ತಿದ್ದರು. ಇಂದು ಅವಿಭಕ್ತ ಕುಟುಂಬಗಳು ಮರೆಯಾಗಿ ಸಣ್ಣ ಕುಟುಂಬಗಳೇ ಹೆಚ್ಚಾಗುತ್ತಿವೆ. ಒಂದೇ ಮನೆಯ ನಾಲ್ಕು ಜನರ ಮನಸ್ಸುಗಳನ್ನು ಒಂದಾಗಿಡುವುದೇ ಕಷ್ಟವಾಗಿರುವಾಗ, ಕೋಟ್ಯಂತರ ಜನರನ್ನು ಧರ್ಮದ ಹೆಸರಿನಲ್ಲಿ ಒಗ್ಗೂಡಿಸುವುದಾಗಿ ಹೇಳಿಕೊಳ್ಳುವುದು ಎಷ್ಟು ವಾಸ್ತವಿಕ?

ಮೊದಲು ತಮ್ಮ ಮನಸ್ಸನ್ನು ಗೆಲ್ಲಲಿ

ಧರ್ಮದ ಹೆಸರಿನಲ್ಲಿ ಜಗತ್ತನ್ನೇ ಗೆಲ್ಲಬೇಕೆಂಬ ಹಂಬಲ ಯಾರಿಗಾದರೂ ಇದ್ದರೆ, ಮೊದಲು ತಮ್ಮ ಮನಸ್ಸನ್ನು ಗೆಲ್ಲಲಿ. ಇಡೀ ಜಗತ್ತನ್ನು ಒಂದೇ ಧರ್ಮದ ಅಡಿಯಲ್ಲಿ ತರಬೇಕೆಂಬ ಕನಸು ಕಾಣುವುದಕ್ಕಿಂತ ಎಲ್ಲ ಧರ್ಮಗಳ ಜನರು ಪರಸ್ಪರ ಗೌರವದಿಂದ ಬದುಕುವ ವಾತಾವರಣ ನಿರ್ಮಿಸುವುದು ಶ್ರೇಷ್ಠವಲ್ಲವೇ?

ಮನುಷ್ಯನ ಕಣ್ಣೀರಿಗೆ ಧರ್ಮವಿಲ್ಲ

ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ, ಸಿಖ್ ಸೇರಿದಂತೆ ಎಲ್ಲ ಧರ್ಮಗಳಲ್ಲಿಯೂ ಶಾಂತಿ, ಕರುಣೆ, ಸತ್ಯ ಮತ್ತು ಸದಾಚಾರದ ಬೋಧನೆಗಳಿವೆ. ಆಚರಣೆಗಳು ಬೇರೆ, ಆರಾಧನೆಯ ವಿಧಾನಗಳು ಬೇರೆ. ಆದರೆ ಮನುಷ್ಯನ ಕಣ್ಣೀರಿಗೆ ಧರ್ಮವಿಲ್ಲ. ಹಸಿವಿಗೆ ಜಾತಿಯಿಲ್ಲ. ನೋವಿಗೆ ಪಂಗಡವಿಲ್ಲ. ಸಾವಿಗೆ ಮತವಿಲ್ಲ. ಹಾಗಿರುವಾಗ ಬದುಕಿಗೆ ಮಾತ್ರ ಇಷ್ಟೊಂದು ಧಾರ್ಮಿಕ ಗೋಡೆಗಳೇಕೆ?

ಧರ್ಮದ ಹೆಸರಿನಲ್ಲಿ ದ್ವೇಷದ ಬೀಜ ಬಿತ್ತುವವರು ಒಂದು ಸತ್ಯವನ್ನು ಅರಿಯಬೇಕು. ಬೆಂಕಿ ಹಚ್ಚುವುದು ಸುಲಭ. ಆದರೆ ಅದು ವ್ಯಾಪಿಸಿದ ನಂತರ ತನ್ನ ಮನೆಯನ್ನೂ ಸುಡಬಹುದು. ಧಾರ್ಮಿಕ ಅಸಹಿಷ್ಣುತೆ, ಮತಾಂಧತೆ ಮತ್ತು ಪರಸ್ಪರ ದ್ವೇಷ ಹೀಗೆಯೇ ಮುಂದುವರಿದರೆ ಸಮಾಜದ ಒಡಲೊಳಗೆ ಸಂಗ್ರಹವಾಗುತ್ತಿರುವ ಅಸಮಾಧಾನದ ಅಗ್ನಿ ಒಂದು ದಿನ ಸ್ಫೋಟಗೊಳ್ಳಬಹುದು. ಅದರ ಪರಿಣಾಮ ಒಂದು ಧರ್ಮಕ್ಕೋ, ಒಂದು ದೇಶಕ್ಕೋ ಸೀಮಿತವಾಗುವುದಿಲ್ಲ. ಇಡೀ ಮಾನವಕುಲವೇ ಅದರ ಬೆಲೆ ತೆರಬೇಕಾಗಬಹುದು.



ಮಾನವೀಯತೆಯ ವಿಜಯ ದೊಡ್ಡದು

ಧರ್ಮವನ್ನು ಉಳಿಸುವುದಕ್ಕಿಂತ ಮೊದಲು ಧರ್ಮದೊಳಗಿನ ಮಾನವೀಯತೆಯನ್ನು ಉಳಿಸಬೇಕಾಗಿದೆ. ಸಂಖ್ಯಾಬಲಕ್ಕಿಂತ ಸೌಹಾರ್ದದ ಬಲ ಮುಖ್ಯ. ಮತಾಂತರಕ್ಕಿಂತ ಮನಃಪರಿವರ್ತನೆ ಮುಖ್ಯ. ಧರ್ಮದ ವಿಜಯಕ್ಕಿಂತ ಮಾನವೀಯತೆಯ ವಿಜಯ ದೊಡ್ಡದು. ಜಗತ್ತನ್ನು ಅಳಿಸಿ ಒಂದು ಧರ್ಮವನ್ನು ಉಳಿಸುವುದರಲ್ಲಿ ಯಾವ ಪುರುಷಾರ್ಥವಿದೆ? ಮನುಷ್ಯನೇ ಇಲ್ಲದ ಮೇಲೆ ಧರ್ಮ ಯಾರಿಗಾಗಿ?

ಧರ್ಮಗಳು ಬದುಕಿಗೆ ಬೆಳಕಾಗಬೇಕೇ ಹೊರತು ಬದುಕನ್ನೇ ಸುಡುವ ಬೆಂಕಿಯಾಗಬಾರದು.

ಎಚ್ಚರ ಮನುಕುಲವೇ! ಧರ್ಮಗಳ ದಂಗಲ್ ನಿಲ್ಲದಿದ್ದರೆ, ಒಡಲೊಳಗಿನ ಅಗ್ನಿ ಸ್ಫೋಟವಾಗಿ ಜಗತ್ತಿನ ಶಾಂತಿಯನ್ನೇ ಭಸ್ಮ ಮಾಡೀತು. ಜೋಕೆ!



ಅಮ್ಮ ಫೌಂಡೇಶನ್: ನ.22ರಂದು 'ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದಿನಾಂಕ ನ.22ರಂದು ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಅಮ್ಮ ಫೌಂಡೇಶನ್ ವತಿಯಿಂದ 'ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ' ಕಾರ್ಯಕ್ರಮ ಜರುಗಲಿದೆ.

ಬಾನುವಾರ ಬೆಳಿಗ್ಗೆ 10 ಗಂಟೆಗೆ ನಾಡು ನುಡಿ, ನೆಲ ಜಲ ಭಾಷೆ ಉಳುವಿಗಾಗಿ ನಡೆಯುವ ಸಮಾರಂಭಕ್ಕೆ ತಾಳಿಕೋಟಿ ಶ್ರೀ ಖಾಸ್ಗತೇಶ್ವರ ಮಠದ ಪೂಜ್ಯ ಸಿದ್ದಲಿಂಗ ದೇವರು ಸಾನಿಧ್ಯ ವಹಿಸಲಿದ್ದು, ರಾಜ್ಯದ ಪ್ರಥಮ ಮಹಿಳಾ ಹೃದ್ರೋಗ ತಜ್ಞೆ ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ ಸಮಾರಂಭ ಉದ್ಘಾಟಿಸಲಿದ್ದಾರೆ. ಇಂಡಿ ಶಾಶಕ ಯಶವಂತರಾಯಗೌಡ ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ವಿಧಾನಪರಿಷತ್ ಸದಸ್ಯರಾದ ಸುನೀಲಗೌಡ ಪಾಟೀಲ ನಾಡದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ

ಜೊತೆಗಾರರನ್ನು ಸಾವಯವ ರೈತರಾಗಿ ಪರಿವರ್ತಿಸಲು ಪಣತೊಟ್ಟ ಚಂದ್ರಕಾಂತ

ಹತಾಶೆಯಿಂದ ಮಿಂದಿದ್ದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಟೆ ಗ್ರಾಮದ ಚಂದ್ರಕಾಂತ ಕೂಡ್ಲಪ್ಪ ಚೂರಿ ಎಂಬ ಯುವ ರೈತ ಜಿಗುಪ್ಸೆಯಿಂದ ಮೇಲೆದ್ದ ಕಥೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ ತಾಲೂಕಿನ ಚಾಂದಕವಟೆ ಎಂಬ ಗ್ರಾಮದಲ್ಲಿ ಚಂದ್ರಕಾಂತ ಕೂಡ್ಲಪ್ಪ ಚೂರಿ ಎಂಬ ಯುವ ರೈತ ಮೂರು ಮಕ್ಕಳ ತಂದೆ. ಅವರ ತಂದೆಗೆ ಪ್ರೀತಿಯ ಒಬ್ಬನೇ ಮಗ. ಮೂಲತಃ ವ್ಯವಸಾಯವೇ ಮನೆತನದ ಮೂಲ ಕಸಬು. ಸದಾ ಸಂಘಜೀವಿ, ನಾಯಕತ್ವದ ಗುಣ, ಸಮಾಜಮುಖಿ ಕೆಲಸಗಾರ, ಆದರೆ ಸಹವಾಸ ದೋಷದಿಂದ ದಾರಿ ಬಿಟ್ಟು ಹತಾಶೆಯಿಂದ ಕೂಡಿದ ಬೇಸರದ ಜೀವನ ಸಾಗಿಸುತ್ತಾ ಜಿಗುಪ್ಸೆ ಯಲ್ಲಿ ಜೀವನ ತಳ್ಳುತ್ತಾ ಜೀವಕ್ಕೆ ಅಂತ್ಯ ಹಾಡುವ ನಿರ್ಧಾರವನ್ನು ಮಾಡಿದ್ದರು. ಆದರೆ ಅರಿವೇ ಗುರುವಾಗಿ ಮನಸ್ಸಿನ ಮೇಲೆ ಮೂಡಿದಾಗ ಆ ಎಲ್ಲ ವ್ಯಸನಗಳಿಗೆ ಅಂತ್ಯ ಹಾಡಿ ಕಠಿಣ ನಿರ್ಧಾರ ಮಾಡಿ ಹಿರಿಯರಿಂದ ಬಂದ ಫಲವತ್ತಾದ ಭೂಮಿಯಲ್ಲಿ ಕೃಷಿ ಮಾಡಿ ಬದುಕಲು ಶಪಥ ಗೈದು, ಸಾವಯವ ಕೃಷಿಗೆ ಇಳಿದು ಸಾಧನೆಗೈದರು.

ಚಂದ್ರಕಾಂತ್ ಈ ಮುಂಚಿನ ಸಾಂಪ್ರದಾಯಿಕ ಬೆಳೆಗಳಿಗೆ ಗುಡ್ ಬೈ ಹೇಳಿ, ರಾಸಾಯನಿಕ ಗೊಬ್ಬರಗಳಿಗೆ ತಿಲಾಂಜಲಿ ಇಟ್ಟರು. 10 ಎಕರೆ ಭೂಮಿಗೆ ಸಂಪೂರ್ಣ ಸಾವಯವ ಬೇಸಾಯಕ್ಕೆ ನಿರ್ಧರಿಸಿ ಗಿರ್ ಮತ್ತು ಜವಾರಿ ತಳಿಯ 12 ಆಕಳಗಳನ್ನು ಖರೀದಿಸಿದರು.





60*60 ಚದುರ ಅಡಿಯಲ್ಲಿ ಬಯೋಗ್ಯಾಸ್ ಪ್ಲಾಂಟ್ ಧಾರವಾಡದ ತಜ್ಞರಿಂದ ಮಾಡಿಸಿ ಅದರ ಸ್ಲರಿ (ದ್ರಾವಣ) ಮತ್ತು ಜೀವಾಮೃತ 10 ಎಕರೆಗೆ ಆಗುವಷ್ಟು ತಯಾರಿಸಿಕೊಂಡು 2025 ಏಪ್ರಿಲ್ ನಲ್ಲಿ ಅಧಿಕೃತವಾಗಿ ಶುರುವಾಯಿತು ಅಸಲಿ ಆಟ..

ಪಂಡರಪುರದ ಡಾ. ಬಾಬಾ ಸಾಹೇಬ್ ಅವರ ಮಾರ್ಗದರ್ಶನದಲ್ಲಿ ಆರು ಎಕ್ರೆ ಭೂಮಿಗೆ ಶರತ್ ಕಿಂಗ್, ನಾಲ್ಕು



ಎಕ್ರೆಯ ಭೂಮಿಗೆ ಜೈನ ಕೇಸರ್, ಎಂಬ ತಳಿಯ ಸಸಿಗಳನ್ನು ಪಂಡರಪುರ ಮತ್ತು ಗುಜರಾತಿ ನಿಂದ ತಲಾ 50 ರೂಪಾಯಿ ಒಂದರಂತೆ 3500 ಸಸಿಗಳನ್ನು ತಂದು, 2025ರಂದು ಸಾಲಿನಿಂದ ಸಾಲಿಗೆ 14 ಅಡಿ,ಗಿಡದಿಂದ ಗಿಡಕ್ಕೆ 8 ಅಡಿ ಅಂತರದಲ್ಲಿ ನಾಟಿ ಮಾಡಿದರು. ಒಂದು ಎಕರೆ ನೆಲಕ್ಕೆ ಸರಾಸರಿ 350 ಗಿಡಗಳನ್ನು ಹಚ್ಚಿ ಗಿಡದ ಎರಡು ಬದಿಗೆ ಹನಿ ನೀರಾವರಿ ಪೈಪ್ ಜೋಡಣೆ ಮಾಡಿ ಪ್ರತಿ ಗಿಡಕ್ಕೂ ನಿಗದಿಪಡಿಸಿದಷ್ಟೇ ನೀರು ಬೀಳುವಂತೆ ಮಾಡಿದ್ದಾರೆ. ಸದ್ಯಕ್ಕೆ ಎರಡು ಟ್ಯಾಕ್ಟರ್ ಒಂದು ಸ್ಪ್ರೇ ಯಂತ್ರ ಒಂದು ಸ್ಲರಿ ಟ್ಯಾಂಕ್ ಈಗ ಅಗತ್ಯವಿರುವ ಎಲ್ಲ ಯಂತ್ರೋಪಕರಣಗಳನ್ನು ಖರೀದಿಸಿದ್ದು ದಿನಾಲು ಸರಾಸರಿ 10 ಆಳುಗಳೊಂದಿಗೆ ಸ್ವತಃ ತಾವು ಕೆಲಸ ಮಾಡುತ್ತಾರೆ.

ಸದ್ಯ ಹದಿನೈದು 15 ತಿಂಗಳ ಗಿಡಗಳಿದ್ದು ಒಂದು ಗಿಡಕ್ಕೆ ಸರಾಸರಿ 100 – 120 ಕಾಯಿಗಳನ್ನು ಮಾತ್ರ ಉಳಿಸಿಕೊಂಡು ಹೆಚ್ಚಿನವುಗಳನ್ನು ಕಿತ್ತುಹಾಕಿದ್ದಾರೆ. ಸದ್ಯದ ಕಾಯಿ ಕಟಾವಿಗೆ ಬರಲು ಇನ್ನೂ ಎರಡು ತಿಂಗಳು ಕಾಲಾವಕಾಶ ಇದೆ. ಸದ್ಯ ಒಂದು ಕಾಯಿ 300 ರಿಂದ 350 ಗ್ರಾಂ ತೂಕ ಹೊಂದಿದೆ. ಮಾಗಿದ ಮೇಲೆ ತೂಕ ಇನ್ನು ಹೆಚ್ಚಾಗುತ್ತದೆ. ಒಂದು ಗಿಡಕ್ಕೆ ಅಂದಾಜು 20 ರಿಂದ 25 ಕೆಜಿ ಲೆಕ್ಕ ಹಾಕಿದರು ಈ ವರ್ಷ ಅದರ ಇಳುವರಿ ಒಂದೂವರೆ ಕೋಟಿ ವರೆಗೂ ಆದಾಯದ ನಿರೀಕ್ಷೆಯಲ್ಲಿದ್ದಾರೆ. ಪ್ರಾರಂಭಿಕ ವರ್ಷ ಆದ್ದರಿಂದ 60 ರಿಂದ 65 ಲಕ್ಷ ರೂಪಾಯಿವರೆಗೆ ಖರ್ಚು ಮಾಡಿದ್ದಾರೆ.

ತಮ್ಮ ಸುತ್ತಮುತ್ತಲಿನ ರೈತರನ್ನು ಕೂಡ ಸಾವಯವ ರೈತರಾಗಿ ಪರಿವರ್ತಿಸಲು ಪಣತೊಟ್ಟಿರುವ ಚಂದ್ರಕಾಂತ ಅವರಿಗೆ ಶುಭ ಹಾರೈಸೋಣ. ಅವರ ದೂರವಾಣಿ ನಂಬರ್ 9353635340



ಜಿ.ಎಸ್.ಭೂಸಗೊಂಡ.
ಹಿರಿಯ ಕಲಾವಿದರು &ಲೇಖಕರು
ತಿಕೋಟಾ – ವಿಜಯಪುರ ಜಿಲ್ಲೆ



ಸದ್ದಾಂ ಹುಸೇನ್ ಜಮಾದಾರ್ ಗೆ ಸಿರಿಗನ್ನಡ ಸಾಧಕ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಇಂಗಳಗಿ ಗ್ರಾಮದ ಪತ್ರಕರ್ತ ಸದ್ದಾಂ ಹುಸೇನ್ ಜಮಾದಾರ್ ಅವರು ಪತ್ರಿಕಾ ಕ್ಷೇತ್ರದಲ್ಲಿ ಕಳೆದ 12 ವರ್ಷಗಳಿಂದ ಸಲ್ಲಿಸುತ್ತಿರುವ ನಿರಂತರ ಸೇವೆ ಹಾಗೂ ಸಾಮಾಜಿಕ ಕಳಕಳಿಯನ್ನು ಗುರುತಿಸಿ ಅಮ್ಮ ಫೌಂಡೇಶನ್ ವತಿಯಿಂದ ನೀಡಲಾಗುವ ಪ್ರತಿಷ್ಠಿತ "ರಾಜ್ಯಮಟ್ಟದ ಸಿರಿಗನ್ನಡ ಸಾಧಕ" ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ನವೆಂಬರ್ 22ರಂದು ವಿಜಯಪುರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆಯಲಿರುವ "ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ–2026" ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು.



ಸದ್ದಾಂ ಹುಸೇನ್ ಜಮಾದಾರ್ ಅವರು ಕಳೆದ ಸುಮಾರು 12 ವರ್ಷಗಳಿಂದ ಕನ್ನಡ ಪ್ರಾದೇಶಿಕ ದಿನಪತ್ರಿಕೆ 'ಗುಮ್ಮಟ ನಗರಿ'ಯಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಾ ಪತ್ರಿಕೋದ್ಯಮದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇದೀಗ ತಮ್ಮದೇ ಆದ 'ಜಗತ್ತಿನ ದಾರಿ' ಕನ್ನಡ ದಿನಪತ್ರಿಕೆಯನ್ನು ಆರಂಭಿಸಿ ಪತ್ರಿಕೋದ್ಯಮದಲ್ಲಿ ಸ್ವತಂತ್ರ ಹೆಜ್ಜೆ ಇಟ್ಟಿದ್ದಾರೆ.

ಇದರ ಜೊತೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಿಜಯಪುರ ಜಿಲ್ಲಾ ಘಟಕದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದು, ಪತ್ರಕರ್ತರ ಸಂಘಟನೆಯ ಬಲವರ್ಧನೆ, ಪತ್ರಕರ್ತರ ಹಕ್ಕುಗಳು, ಸಮಸ್ಯೆಗಳು ಹಾಗೂ ವೃತ್ತಿಪರ ಹಿತಾಸಕ್ತಿಗಳ ಪರವಾಗಿ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪತ್ರಕರ್ತರ ಒಗ್ಗಟ್ಟು ಮತ್ತು ಸಂಘಟನೆಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ.

ಕೇವಲ ಪತ್ರಿಕಾ ವೃತ್ತಿಗೆ ಸೀಮಿತವಾಗದೆ, ಮಾಧ್ಯಮದ ಮೂಲಕ ಸಮಾಜದ ಸಮಸ್ಯೆಗಳಿಗೆ ಧ್ವನಿಯಾಗುತ್ತಾ ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸುವುದು, ಸಾಮಾಜಿಕ ಜಾಗೃತಿ ಮೂಡಿಸುವುದು ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿಶೇಷವಾಗಿ ಗ್ರಾಮೀಣ ಭಾಗದ ಜನರ ಸಮಸ್ಯೆಗಳು, ರೈತರ ಸಂಕಷ್ಟಗಳು, ಶಿಕ್ಷಣ, ಆರೋಗ್ಯ, ಮಹಿಳೆಯರ ಹಕ್ಕುಗಳು ಹಾಗೂ ಸಮಾಜದ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳನ್ನು ವರದಿಗಳ ಮೂಲಕ ಬೆಳಕಿಗೆ ತರುವಲ್ಲಿ ಶ್ರಮಿಸುತ್ತಿದ್ದಾರೆ.

ಪತ್ರಿಕಾ ಕ್ಷೇತ್ರದಲ್ಲಿ ಸುದೀರ್ಘ ಸೇವೆ, ಪತ್ರಕರ್ತರ ಸಂಘಟನೆಯಲ್ಲಿ ಸಲ್ಲಿಸುತ್ತಿರುವ ಜವಾಬ್ದಾರಿಯುತ ಕಾರ್ಯ, ಕನ್ನಡ ಭಾಷೆ ಮತ್ತು ನಾಡಿನ ಬಗ್ಗೆ ಹೊಂದಿರುವ ಅಭಿಮಾನ ಹಾಗೂ ಸಾಮಾಜಿಕ ಕಳಕಳಿಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಅಮ್ಮ ಫೌಂಡೇಶನ್ ಗೌರವಾಧ್ಯಕ್ಷ ಯು.ಐ. ಶೇಖ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಕದಂಬ ಚಾಲುಕ್ಯ ಪ್ರಶಸ್ತಿಗೆ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ


ವಿಜಯಪುರ: ಪ್ರತಿ ವರ್ಷದಂತೆಯೂ ಈ ವರ್ಷವೂ ಕರ್ನಾಟಕದ ದೀಕ್ಷಾಬದ್ಧ ಸಂಘಟನೆಯದ ಕದಂಬ ಸೈನ್ಯದಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕದಂಬ ಚಾಲುಕ್ಯ ಪ್ರಶಸ್ತಿ ಇನ್ನು ಹಲವಾರು ಪ್ರಶಸ್ತಿಗಳನ್ನು ಪುರಸ್ಕರಿಸುವುದು ಒಂದು ವಾಡಿಕೆ ಇದರ ಪ್ರಯುಕ್ತವಾಗಿ 2026 ಕನ್ನಡ ರಾಜ್ಯೋತ್ಸವದ ಕದಂಬ ಸೈನ್ಯ ವತಿಯಿಂದ ವಿಜಯಪುರ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರಿಗೆ ಕದಂಬ ಚಾಲುಕ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪತ್ರಕರ್ತರಾಗಿ ಮೂರು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ರಾಜ್ಯಾಧ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ, ಶಿಕ್ಷಕ ವೃತ್ತಿಯ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಪ್ರಾರ್ಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರು ಹಾಗೂ ಸರ್ಕಾರಿ ನೌಕರರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಅರ್ಜುನ್ ಜಿ ಲಮಾಣಿ ಅವರಿಗೆ ಕದಂಬ ಚಾಲುಕ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವಿಜಯಪುರ ಮಹಾನಗರ ಪಾಲಿಕೆಯ ಕನ್ನಡ ಜಾಗೃತಿ ಸಮಿತಿಯ ಸದಸ್ಯ ಚೆನ್ನು ಜಿ ಕಟ್ಟಿಮನಿ,

ಡಾ.ಸುರೇಶಕುಮಾರ ರಾಜಗುರು ಅಧ್ಯಕ್ಷರು, ಶ್ರೀ ಸಂಗಮೇಶ್ವರ ಸೇವಾ ಸಮಿತಿ ಇವರಿಗೆ ಹೊಯ್ಸಳ ವಿಷ್ಣುವರ್ಧನ ಚಕ್ರವರ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮೂರು ದಶಕಗಳಿಂದ ಪತ್ರಿಕಾ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಂಕರ್ ಎಂ ಜೆಲ್ಲಿ ಅವರಿಗೆ ಕದಂಬ ಚಾಲುಕ್ಯ ಮಾಧ್ಯಮ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸರಕಾರಿ ಸೇವೆಯಲ್ಲಿ ತೊಡಗಿಕೊಂಡ ರಂಜಿತ್ ಬಸವಂತ್ ಮಾನಕರ ಅವರಿಗೆ ಕದಂಬ ಚಾಲುಕ್ಯ ಪ್ರಶಸ್ತಿ, ಕೃಷಿ ವಿಭಾಗದಿಂದ ಸುರೇಶ್ ಲಿಂಗದಳ್ಳಿ ಅವರಿಗೆ ಕದಂಬ ಚಾಲುಕ್ಯ ಕೃಷಿ ರತ್ನ ಪ್ರಶಸ್ತಿ, ಸಮಾಜ ಸೇವಕರು ಆದ ಆನಂದ್ ಕಾಳಗಿಯವರಿಗೆ ಕದಂಬ ಚಾಲುಕ್ಯ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ.

ಈ ಎಲ್ಲಾ ಪ್ರಶಸ್ತಿಗಳನ್ನು ದಿನಾಂಕ 20–11–2026 ಶುಕ್ರವಾರ ದಂದು ಸಿದ್ಧಾಪುರ ತಾಲೂಕಿನ ಭುವನಗಿರಿ ಶ್ರೀ ಭುವನೇಶ್ವರಿ ಸಾನಿಧ್ಯದಲ್ಲಿ ಪ್ರಧಾನ ಮಾಡಲಾಗುತ್ತಿದ್ದು, ಕದಂಬ ಸೈನ್ಯ ರಾಜ್ಯಾಧ್ಯಕ್ಷರು ಬೇಕರಿ ರಮೇಶ್, ರಾಜ್ಯ ಉಪಾಧ್ಯಕ್ಷರಾದ ಎನ್ ಸಿ ಕಾಂಬಳೆ, ರಾಜ್ಯ ಕಾರ್ಯದರ್ಶಿ ವಿನಾಯಕ ಸೊಂಡೂರ್, ವಿಜಯಪುರ ಜಿಲ್ಲಾಧ್ಯಕ್ಷ ಇರ್ಫಾನ ಬೀಳಗಿ ಇವರೆಲ್ಲ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಸಲ್ಲಿಸಿದ್ದಾರೆಂದು ರಾಜ್ಯ ಕಾರ್ಯದರ್ಶಿ ಸೊಂಡೂರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಗುಣಮಟ್ಟದ ಸಂಶೋಧನಾ ಪ್ರಕಟಣೆಗಳಿಗೆ ಆದ್ಯತೆ ನೀಡಿ: ಪ್ರೊ. ಬಟ್ಟು ಸತ್ಯನಾರಾಯಣ



ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗವು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿಯ ಹೈದರಾಬಾದನ ದಕ್ಷಿಣ ಪ್ರಾದೇಶಿಕ ಕೇಂದ್ರದ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ಸೆಮಿನಾರ್ ಸಭಾಂಗಣದಲ್ಲಿ "ಅರ್ಥಶಾಸ್ತ್ರ ಬೋಧಕ ವೃಂದಕ್ಕಾಗಿ "ಟೈಮ್ ಸೀರೀಸ್ ಮತ್ತು ಪ್ಯಾನಲ್ ಡೇಟಾ ವಿಶ್ಲೇಷಣೆ' ಕುರಿತು ಮೂರು ದಿನಗಳ ಬೋಧಕ ವೃಂದ ಅಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ನವೆಂಬರ್ 16ರಿಂದ 18ರವರೆಗೆ ನಡೆಯಲಿರುವ ಈ ಕಾರ್ಯಕ್ರಮವು ಬೋಧಕ ವೃಂದದ ಸದಸ್ಯರು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಆರ್ಥಿಕಮಾಪನ ಕೌಶಲ್ಯ ಮತ್ತು ಸಂಶೋಧನಾ ವಿಧಾನಗಳನ್ನು ಬಲಪಡಿಸುವ ಉದ್ದೇಶ ಹೊಂದಿದೆ.

ಜ್ಞಾನ, ವಿವೇಕ ಮತ್ತು ಶೈಕ್ಷಣಿಕ ಶ್ರೇಷ್ಠತೆಯ ಸಂಕೇತವಾಗಿ ಗಣ್ಯರು ಸಾಂಪ್ರದಾಯಿಕವಾಗಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು, ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಪ್ರಕಟಣೆಗಳ ಗುಣಮಟ್ಟವನ್ನು ಹೆಚ್ಚಿಸುವ ಅಗತ್ಯವನ್ನು ಒತ್ತಿಹೇಳಿದರು. ಪ್ರತಿಷ್ಠಿತ ಸ್ಕೋಪಸ್ ಸೂಚ್ಯಂಕಿತ ನಿಯತಕಾಲಿಕೆಗಳಲ್ಲಿ, ವಿಶೇಷವಾಗಿ ಕ್ಯೂ1 ಮತ್ತು ಕ್ಯೂ2 ಶ್ರೇಣಿಯ ಜರ್ನಲ್‌ಗಳಲ್ಲಿ ಉನ್ನತ ಗುಣಮಟ್ಟದ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲು ಬೋಧಕ ವೃಂದದ ಸದಸ್ಯರು ಹಾಗೂ ಸಂಶೋಧಕರು ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಪ್ರಕಟವಾಗುವ ಪ್ರಬಂಧಗಳ ಸಂಖ್ಯೆಯ ಬದಲಾಗಿ ಅವುಗಳ ಗುಣಮಟ್ಟ ಮತ್ತು ಸಂಶೋಧನಾ ಕ್ಷೇತ್ರದ ಮೇಲಿನ ಪ್ರಭಾವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಒಂದು ದೇಶ–ಒಂದು ಚಂದಾದಾರಿಕೆ ಉಪಕ್ರಮದ ಮಹತ್ವವನ್ನು ಉಲ್ಲೇಖಿಸಿದ ಅವರು, ವಿಶ್ವವಿದ್ಯಾಲಯದ ಮೂಲಕ ಸಂಶೋಧಕರಿಗೆ ವಿವಿಧ ವಿದ್ವತ್ಪೂರ್ಣ ಸಂಪನ್ಮೂಲಗಳು ಹಾಗೂ ಶೈಕ್ಷಣಿಕ ಪ್ರಕಟಣೆಗಳನ್ನು ಬಳಸಿಕೊಳ್ಳಲು ಅವಕಾಶವಿದೆ ಎಂದರು. ಸಾಹಿತ್ಯ ಸಮೀಕ್ಷೆಯನ್ನು ಸಮಗ್ರಗೊಳಿಸಲು, ಸಂಶೋಧನೆಗೆ ಭದ್ರ ಬುನಾದಿ ರೂಪಿಸಿಕೊಳ್ಳಲು ಹಾಗೂ ಪರಿಣಾಮಕಾರಿ ಸಂಶೋಧನಾ ಫಲಿತಾಂಶಗಳನ್ನು ಹೊರತರುವಲ್ಲಿ ಈ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಬೋಧಕ ವೃಂದದ ಸದಸ್ಯರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಸಂಶೋಧನೆಯು ಕೇವಲ ಶೈಕ್ಷಣಿಕ ಪ್ರಕಟಣೆಗಳಿಗೆ ಸೀಮಿತವಾಗದೆ, ಜ್ಞಾನಸೃಷ್ಟಿಗೆ ಕೊಡುಗೆ ನೀಡುವುದರ ಜೊತೆಗೆ ಶೈಕ್ಷಣಿಕ ಗುಣಮಟ್ಟ ಮತ್ತು ವಿಶ್ವವಿದ್ಯಾಲಯದ ಸಂಶೋಧನಾ ಸಾಧನೆಯನ್ನು ಹೆಚ್ಚಿಸುವಂತಿರಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಭಾಷಣ ಮಾಡಿದ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್ ಅವರು, ವಿಶೇಷವಾಗಿ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಉದ್ದೇಶಪೂರ್ವಕ ಹಾಗೂ ವ್ಯವಸ್ಥಿತ ಸಂಶೋಧನೆಯ ಮಹತ್ವವನ್ನು ವಿವರಿಸಿದರು. ಸೂಕ್ತ ಸಂಶೋಧನಾ ಸಮಸ್ಯೆಗಳನ್ನು ಗುರುತಿಸುವುದು, ಸಮರ್ಪಕ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅರ್ಥಪೂರ್ಣ ಶೈಕ್ಷಣಿಕ ಕೊಡುಗೆಗಳನ್ನು ನೀಡುವುದು ಅಗತ್ಯವೆಂದು ಹೇಳಿದರು. ಸಂಶೋಧನೆಯು ಸೈದ್ಧಾಂತಿಕ ತಿಳುವಳಿಕೆಗೆ ಮಾತ್ರ ಸೀಮಿತವಾಗದೆ, ಹೊಸ ಜ್ಞಾನಸೃಷ್ಟಿ ಮತ್ತು ಪ್ರಾಯೋಗಿಕ ಅನ್ವಯಿಕೆಗಳಿಗೆ ನೆರವಾಗಬೇಕು ಎಂದು ತಿಳಿಸಿದರು. ಸಂಶೋಧನಾ ಸಾಮರ್ಥ್ಯ ವೃದ್ಧಿ, ಶೈಕ್ಷಣಿಕ ಗುಣಮಟ್ಟ ಸುಧಾರಣೆ ಹಾಗೂ ಗುಣಮಟ್ಟದ ಸಂಶೋಧನಾ ಪ್ರಕಟಣೆಗಳನ್ನು ಉತ್ತೇಜಿಸುವಲ್ಲಿ ಇಂತಹ ಬೋಧಕ ವೃಂದ ಅಭಿವೃದ್ಧಿ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ವಾಣಿಜ್ಯ ಅಧ್ಯಯನ ನಿಕಾಯದ ಡೀನ್ ಪ್ರೊ. ಪಾಂಡುರಂಗ ವಿ. ಪತ್ತಿ ಅವರು, ಬೋಧಕ ವೃಂದದ ಸದಸ್ಯರಲ್ಲಿ ನಿರಂತರ ಕಲಿಕೆ ಮತ್ತು ವೃತ್ತಿಪರ ಕೌಶಲ್ಯ ವೃದ್ಧಿಯ ಮಹತ್ವವನ್ನು ಒತ್ತಿಹೇಳಿದರು.

ಆರ್ಥಿಕ ಅಧ್ಯಯನ ಮತ್ತು ಯೋಜನಾ ವಿಭಾಗದ ಮುಖ್ಯಸ್ಥೆ ಡಾ. ಸುಮಾ ಸ್ಕೇರಿಯಾ ಅವರು ಸಮಕಾಲೀನ ಆರ್ಥಿಕ ಸಂಶೋಧನೆಯಲ್ಲಿ ಆರ್ಥಿಕಮಾಪನ ಶಾಸ್ತ್ರದ ಹೆಚ್ಚುತ್ತಿರುವ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದ ನಿರ್ದೇಶಕ ಡಾ. ಮಲ್ಲೇಶ್ ಉಮ್ಮಲ್ಲ ಅವರು ಸ್ವಾಗತ ಭಾಷಣ ಮಾಡಿದರು.ಪಿಡಿಪಿಯ ಸಹ–ನಿರ್ದೇಶಕ ಡಾ. ಎಸ್. ಲಿಂಗಮೂರ್ತಿ ಅವರು ವಂದನಾರ್ಪಣೆ ಸಲ್ಲ

ನ.20 ರಿಂದ ಉಚಿತ ಮೂಲವ್ಯಾಧಿ ತಪಾಸಣೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಎ.ಪಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದ ಶಲ್ಯ ತಂತ್ರ ವಿಭಾಗದ ವತಿಯಿಂದ ವಿಶ್ವ ಮೂಲವ್ಯಾಧಿ ಅಂಗವಾಗಿ ನವೆಂಬರ್ 20 ರಿಂದ ಐದು ದಿನಗಳ ಕಾಲ ಉಚಿತ ಮೂಲವ್ಯಾಧಿ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿದೆ.

ಇಂಥ ಸಮಸ್ಯೆ ಎದುರಿಸುತ್ತಿರವ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು, ಬಿ.ಎಲ್.ಡಿ. ಇ ಸಂಸ್ಥೆಯ ಎ.ಪಿ.ಎಸ್ ಆಯುರ್ವೇದ ಹೈಟೆಕ್ ಆಸ್ಪತ್ರೆ ಮತ್ತು ನಗರ ಆರೋಗ್ಯ ಕೇಂದ್ರದ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಹಾಗೂ ಶಲ್ಯ ತಂತ್ರ ವಿಭಾಗದ ಮುಖ್ಯಸ್ಥ ಡಾ. ಪಿ. ಗನ್ನೂರ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಆಸ್ಪತ್ರೆಯ ಮೊ. ನಂ. 9513397413 ಸಂಪರ್ಕಿಸಬಹುದಾಗಿದೆ.

ನ.21 ರಂದು ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಡಿಸೆಂಬರ್ 13 ರಂದು ನಗರದಲ್ಲಿ ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್ 7ನೇ ಆವೃತ್ತಿಯ ಪೂರ್ವಭಾವಿಯಾಗಿ ನವೆಂಬರ್ 21 ರಂದು ಶನಿವಾರ ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ.

ನಗರದ ಐತಿಹಾಸಿಕ ಗೋಳಗುಮ್ಮಟ ಆವರಣದಲ್ಲಿ ಈ ಸ್ಪರ್ಧೆಗಳು ನಡೆಯಲಿವೆ. ಬೆಳಿಗ್ಗೆ 8.30 ರಿಂದ 10 ಗಂಟೆವರೆಗೆ ಚಿತ್ರಕಲೆ ಸ್ಪರ್ಧೆ ನಡೆಯಲಿದ್ದರೆ, ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಪ್ರಬಂಧ ಸ್ಪರ್ಧೆ ನಡೆಯಲಿದೆ. ಪ್ರೌಢಶಾಲೆ ಮತ್ತು ಪಿಯು ಕಾಲೇಜು ವಿದ್ಯಾರ್ಥಿಗಳಿಗಾಗಿ ಎರಡು ವಿಭಾಗಗಳಲ್ಲಿ ಈ ಸ್ಪರ್ಧೆಗಳು ನಡೆಯಲಿದ್ದು, ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕವಾಗಿ ಈ ಸ್ಪರ್ಧೆ ಆಯೋಜಿಸಲಾಗಿದೆ.

ಈ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನ ರೂ. 10 ಸಾವಿರ, ದ್ವಿತೀಯ ಬಹುಮಾನ ರೂ. 7500, ತೃತೀಯ ಬಹುಮಾನ ರೂ. 5000 ಹಾಗೂ ಸಮಾಧಾನಕರ ಬಹುಮಾನ ರೂ. 2500 ನೀಡಲಾಗುವುದು.

ಆಸಕ್ತರು ಶಿವು ಕುಂಬಾರ 9972795289, ಅಮೀತ ಬಿರಾದಾರ 9880107038 ಹಾಗೂ ರಮೇಶ ಬಿರಾದಾರ 9972025236 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ವೃಕ್ಷಥಾನ್ ಹೆರಿಟೇಜ್ ರನ್ ಕೋರ್ ಕಮಿಟಿ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆ: ಆಕ್ಷೇಪಣೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಮುದ್ರಾಂಕ ಅಂ–ದಾಜು, ಪ್ರಕಟಣೆ ಮತ್ತು ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಪರಿಷ್ಕರಣೆಗಾಗಿ ಕೇಂದ್ರ ಮೌಲ್ಯಮಾಪನ ಸಮಿತಿಯ ರಚನೆ ನಿಯಮಗಳು–2003ರ ನಿಯಮ 4(1)ರಡಿ ರಚಿಸಲಾಗಿರುವ ಮಾರುಕಟ್ಟೆ ಮೌಲ್ಯಮಾಪನ ಉಪ ಸಮಿತಿ, ತಿಕೋಟಾ ವತಿಯಿಂದ ಉಪ ನೋಂದಣಿ ಕಚೇರಿ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಗಳ ಕರಡು ಪ್ರತಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಉಪ ಸಮಿತಿಯ ಅಧ್ಯಕ್ಷರು ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ನ.6ರಂದು ನಡೆದ ಸಭೆಯಲ್ಲಿ ಉಪ ಸಮಿತಿಯ ಎಲ್ಲ ಸದಸ್ಯರು ಪಾಲ್ಗೊಂಡು, ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳನ್ನು ನಿರ್ಧರಿಸಿದ್ದಾರೆ.

ಈ ಪರಿಷ್ಕೃತ ದರಗಳ ಕರಡು ಪ್ರತಿಯನ್ನು ನ.9ರಂದು ಪ್ರಾಥಮಿಕ ಗೆಜೆಟ್ ಅಧಿಸೂಚನೆ ಮೂಲಕ ಪ್ರಕಟಿಸಲಾಗಿದ್ದು, ತಿಕೋಟಾ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಿದೆ.

ಪರಿಷ್ಕೃತ ಮಾರ್ಗಸೂಚಿ ದರಗಳ ಕುರಿತು ಸಾರ್ವಜನಿಕರು ಯಾವುದೇ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ನ.28ರೊಳಗಾಗಿ ಉಪ ನೋಂದಣಾಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯಮಾಪನ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಕೋಟಾ ಇವರಿಗೆ ಸಲ್ಲಿಸಬಹುದಾಗಿದೆ ಎಂದು ತಿಕೋಟಾದ ಉಪ ನೋಂದಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.



ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ :ಕುಂಬಾರ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಬೇಕಾದರೆ ನಿರಂತರ ಅಧ್ಯಯನ, ಸಮಯದ ಸದುಪಯೋಗ, ವಿಷಯಗಳ ಆಳವಾದ ಅರಿವು ಹಾಗೂ ಸೂಕ್ತ ಅಧ್ಯಯನ ಯೋಜನೆಯನ್ನು ಅಳವಡಿಸಿಕೊಳ್ಳಬೇಕು ಎಂದು ವಿಜಯಪುರ ಜಿಲ್ಲೆಯ ಪಪೂ ಕಾಲೇಜಿನ ಹಿರಿಯ ಉಪನ್ಯಾಸಕ ಎಲ್.ಜಿ.ಕುಂಬಾರ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಿಂದಗಿ ನಗರದ ಆರ್.ಡಿ.ಪಾಟೀಲ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪಪೂ ಕಾಲೇಜಿನಲ್ಲಿ ಪೂಜ್ಯಶ್ರೀ ಲಿಂ.ಚೆನ್ನವೀರ ಮಹಾಸ್ವಾಮೀಜಿಗಳ 133ನೇ ಜಯಂತ್ಯುತ್ಸವ ಅಂಗವಾಗಿ ಆಯೋಜಿಸಿದ್ದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಲೆಕ್ಕಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ವಿಷಯಗಳ ಪಾಸಿಂಗ್ ಪ್ಯಾಕೇಜ್ ಬಿಡುಗಡೆಗೊಳಿಸಿ ಉಪನ್ಯಾಸ ನೀಡಿ, ಮಾತನಾಡಿದ ಅವರು, ವಿದ್ಯಾರ್ಥಿಗಳು ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಬೇಕು.ಪ್ರತಿಯೊಂದುವಿಷಯಕ್ಕೂಸಮಾನ ಆದ್ಯತೆ ನೀಡಿ, ಪ್ರತಿದಿನ ಓದುವುದರ ಜೊತೆಗೆ ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡಬೇಕು. ಶಿಕ್ಷಕರು ನೀಡುವ ಮಾರ್ಗದರ್ಶನವನ್ನು ಸರಿಯಾಗಿ ಪಾಲಿಸಿದರೆ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂದರು.

ಈ ವೇಳೆ ಪ್ರಾಚಾರ್ಯ ಬಿ.ಎಂ.ಸಿಂಗನಳ್ಳಿ ಮಾತನಾಡಿ, ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಉನ್ನತ ಸಾಧನೆ ಮಾಡಬೇಕು ಹಾಗೂ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತರಬೇಕು ಎಂಬ ಉದ್ದೇಶದಿಂದ ಕಾಲೇಜಿನ ವತಿಯಿಂದ ವಿಶೇಷ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ನಿರಂತರ ಅಭ್ಯಾಸ, ಶಿಸ್ತು ಮತ್ತು ಪರಿಶ್ರಮದ ಮೂಲಕ ಉತ್ತಮ ಫಲಿತಾಂಶ ಸಾಧಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಪಿ.ಪ್ಹಿ.ಮಹಲಿನಮಠ, ಎಸ್.ಎಚ್.ಜಾಧವ, ಡಾ.ಶರಣಬಸವ ಜೋಗೂರ, ಶಿವಶರಣ ಬೂದಿಹಾಳ, ಎನ್.ಬಿ.ಪೂಜಾರಿ, ವ್ಹಿ.ಕೆ.ಹಿರೇಮಠ, ರಾಹುಲ ನಾರಾಯಣಕರ್, ಪ್ರಸನ್ ಜೋಗೂರ, ಗವಿಸಿದ್ದಪ್ಪ ಆನೆಗುಂದಿ, ಶಿವಯೋಗಿ ತಾಳಿಕೋಟಿ, ಎಸ್.ಜಿ.ಮಾರ್ಸನಳ್ಳಿ, ವಿಶ್ವನಾಥ ನಂದಿಕೋಲ, ಬಿ.ಬಿ.ಜಮಾದಾರ, ಯು.ಸಿ.ಪೂಜೇರಿ,, ಸುನೀಲ ಪಾಟೀಲ ಸೇರಿದಂತೆ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು, ಸಿಬ್ಬಂದಿವರ್ಗ ಇದ್ದರು.

ಸಾರ್ವಜನಿಕರಿಂದ ಹೊಸದಾಗಿ ದೂರುಗಳನ್ನು ಸ್ವೀಕರಿಸುವುದಿಲ್ಲ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ನವೆಂಬರ್ 19ರಿಂದ 21ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಹಾಗೂ ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ತನಿಖೆ ಮತ್ತು ವಿಚಾರಣೆಗೆ ಬಾಕಿಯಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಉದ್ದೇಶದಿಂದ ದೂರುದಾರರು ಮತ್ತು ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಿಸಿರುವ ದೂರುದಾರರು ನಿಗದಿಪಡಿಸಿದ ದಿನಾಂಕ ಹಾಗೂ ಸಮಯದಲ್ಲಿ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಿ ವಿಚಾರಣೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ಮಹಾನಿಂಗರಾಯ ನಂದಗಾಂವಿ ತಿಳಿಸಿದ್ದಾರೆ. ಸಾರ್ವಜನಿಕ ದೂರುಗಳ ವಿಚಾರಣೆಯು ನವೆಂಬರ್ 19 ಮತ್ತು 20ರಂದು ವಿಜಯಪುರ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದ ಸಭಾಂಗಣದಲ್ಲಿ ನಡೆಯಲಿದೆ. ಎರಡೂ ದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಹಾಗೂ ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ವಿಚಾರಣೆ ನಡೆಯಲಿದೆ.ಈ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಹೊಸ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ. ಈಗಾಗಲೇ ಲೋಕಾಯುಕ್ತದಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ವಿಚಾರಣೆ ಮಾತ್ರ ನಡೆಯಲಿದ್ದು, ಸಂಬಂಧಪಟ್ಟ ದೂರುದಾರರು ನಿಗದಿತ ಸಮಯಕ್ಕೆ ಹಾಜರಾಗುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ ನ.19ರಿಂದ 21ರವರೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ವಿಜಯಪುರ ಪ್ರವಾಸ । ಜಿಪಂ ಸಭಾಂಗಣದಲ್ಲಿ ಬಾಕಿ ದೂರು ವಿಚಾರಣೆ । ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ಮಹಾನಿಂಗರಾಯ ನಂದಗಾಂವಿ ಹೇಳಿಕೆ

ನ.19ರಿಂದ 21ರವರೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ವಿಜಯಪುರ ಪ್ರವಾಸ

ನ.19 ಮತ್ತು 20ರಂದು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬಾಕಿ ದೂರು ವಿಚಾರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ನವೆಂಬರ್ 19ರಿಂದ 21ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಹಾಗೂ ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ತನಿಖೆ ಮತ್ತು ವಿಚಾರಣೆಗೆ ಬಾಕಿಯಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಉದ್ದೇಶದಿಂದ ದೂರುದಾರರು ಮತ್ತು ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಿಸಿರುವ ದೂರುದಾರರು ನಿಗದಿಪಡಿಸಿದ ದಿನಾಂಕ ಹಾಗೂ ಸಮಯದಲ್ಲಿ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಿ ವಿಚಾರಣೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ಮಹಾನಿಂಗರಾಯ ನಂದಗಾಂವಿ ತಿಳಿಸಿದ್ದಾರೆ.

ಸಾರ್ವಜನಿಕ ದೂರುಗಳ ವಿಚಾರಣೆಯು ನವೆಂಬರ್ 19 ಮತ್ತು 20ರಂದು ವಿಜಯಪುರ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದ ಸಭಾಂಗಣದಲ್ಲಿ ನಡೆಯಲಿದೆ. ಎರಡೂ ದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಹಾಗೂ ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ವಿಚಾರಣೆ ನಡೆಯಲಿದೆ.ಈ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಹೊಸ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ. ಈಗಾಗಲೇ ಲೋಕಾಯುಕ್ತದಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ವಿಚಾರಣೆ ಮಾತ್ರ ನಡೆಯಲಿದ್ದು, ಸಂಬಂಧಪಟ್ಟ ದೂರುದಾರರು ನಿಗದಿತ ಸಮಯಕ್ಕೆ ಹಾಜರಾಗುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ವೇಳಾಪಟ್ಟಿ ಪ್ರಕಟ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, ಜನವರಿ 1, 2027 ಅನ್ನು ಅರ್ಹತಾ ದಿನಾಂಕವಾಗಿ ಪರಿಗಣಿಸಿ ಜಿಲ್ಲೆಯಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (SSR2027) ಕೈಗೊಳ್ಳಲಾಗುತ್ತಿದ್ದು, ಈ ಪ್ರಕ್ರಿಯೆಗೆ ವೇಳಾಪಟ್ಟಿ ನಿಗದಿಪಡಿಸಲಾಗಿದೆ

ಮತದಾರರ ಪಟ್ಟಿಯಿಂದ ಹೊರಗುಳಿದಿರುವ ಯುವ ಮತದಾರರು ಹಾಗೂ ಮೊದಲ ಬಾರಿಗೆ ಮತದಾರರಾಗಲು ಅರ್ಹತೆ ಹೊಂದಿರುವವರನ್ನು ಪಟ್ಟಿಗೆ ಸೇರ್ಪಡೆಗೊಳಿಸುವ ಉದ್ದೇಶದಿಂದ ಈ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಜನವರಿ 1ರ ಅರ್ಹತಾ ದಿನಾಂಕದ ಆಧಾರದ ಮೇಲೆ ಮತದಾರರ ನೋಂದಣಿಗೆ ಅವಕಾಶ ಕಲ್ಪಿಸುವುದರ ಜೊತೆಗೆ, ಮುಂದಿನ ಮೂರು ಅರ್ಹತಾ ದಿನಾಂಕಗಳಾದ ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1, 2027ಕ್ಕೆ ಮುಂಗಡ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

ನಿಗದಿತ ವೇಳಾಪಟ್ಟಿಯಂತೆ ನವೆಂಬರ್ 23ರಂದು ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ ಕಾರ್ಯ ಕೈಗೊಳ್ಳಲಾಗುತ್ತದೆ. ಡಿಸೆಂಬರ್ 1ರಂದು ಸಮಗ್ರ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಡಿಸೆಂಬರ್ 1ರಿಂದ 31ರವರೆಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸಲ್ಲಿಕೆಯಾದ ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಜನವರಿ 14ರಂದು ವಿಲೇವಾರಿ ಮಾಡಲಾಗುತ್ತದೆ. ಅಂತಿಮವಾಗಿ ಜ.20ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು.


ಅರ್ಹರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗಾಗಿ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಚುನಾವಣಾ ಆಯೋಗದ ಅಧಿಕೃತ ಮತದಾರರ ಸೇವಾ ಪೋರ್ಟಲ್ voters.eci.gov.in ಅಥವಾ ಚುನಾವಣಾ ಆಯೋಗದ ಇಆಖಓಇಖಿ ಮೊಬೈಲ್ ಅಪ್ಲಿಕೇಶನ್ ಬಳಸಬಹುದಾಗಿದೆ. ಅಲ್ಲದೆ, ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿ ಸಹಾಯಕ ಮತದಾರರ ನೋಂದಣಾಧಿಕಾರಿ ಅಥವಾ ಮತದಾರರ ನೋಂದಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ.

ಜಿಲ್ಲೆಯ ಎಲ್ಲ ಅರ್ಹ ನಾಗರಿಕರು ಈ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಪ್ರಕ್ರಿಯೆಯ ಸದುಪಯೋಗ ಪಡೆದುಕೊಂಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಗೋಶಾಲೆ ಕಟ್ಟಡಕ್ಕೆ 11 ಲಕ್ಷ ರೂ. ಅನುದಾನ :ಯಶವಂತರಾಯಗೌಡ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ನಗರದ ಮಧ್ಯಭಾಗದಲ್ಲಿರುವ ಶ್ರೀ ಶಾಂತೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಿರ್ಮಿಸಲು ಯೋಜಿಸಿದ ಗೋಶಾಲೆಯ ಕಟ್ಟಡಕ್ಕೆ 11 ಲಕ್ಷ ರೂ, ಗಳ ಅನುದಾನ ನೀಡುವದಾಗಿ ಶಾಸಕ ಯಶವಂತರಾಯಗೌಡ ಪಾಟೀಲ ಭರವಸೆ ನೀಡಿದರು.

ಅವರು ಮಂಗಳವಾರ ಸಂಸ್ಥೆಯ ಆವರಣದಲ್ಲಿ 1000 ಸಸಿ ನೆಡುವ ಅಭಿಯಾನ ಹಾಗೂ ಗೋಶಾಲೆಯ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಉಡುಪಿಯ ಅಷ್ಟಮಠಗಳು ಹಾಗೂ ದಕ್ಷಿಣ ಕನ್ನಡದಲ್ಲಿ ಗೋವುಗಳಿಗೆ ಪೂಜ್ಯನೀಯ ಭಾವನೆಯೊಂದಿಗೆ ಸಾಕುತ್ತಾರೆ. ಅದೇ ಮಾದರಿಯಲ್ಲಿ ನಮ್ಮ ಭಾಗದಲ್ಲಿಯ ಸಂಘ ಸಂಸ್ಥೆಗಳು ಗೋವುಗಳ ಸಂರಕ್ಷಣೆ ಹಾಗೂ ಸಸಿ ನೆಡುವ ಅಭಿಯಾನಾಕ್ಕೆ ಮುಂದಾಗಿ ಪದೇ ಪದೇ ಎದು–ರಿಸುತ್ತಿರುವ ಬರವನ್ನು ಅಳಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಇದಲ್ಲದೇ ನಮ್ಮ ಸ